**ದಿನಾಂಕ 16.04.2016 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ. 601, ಆರನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 11ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

1. ಶ್ರೀ. ಎಂ. ಲಕ್ಷ್ಮೀನಾರಾಯಣ, ಭಾ.ಆ.ಸೇ : ಅಧ್ಯಕ್ಷರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),
   ಬೆಂಗಳೂರು

2. ಶ್ರೀಮತಿ ಲಕ್ಷ್ಮೀ, : ಸದಸ್ಯರು
   ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,
   (ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪ್ರತಿನಿಧಿಗಳು

3. ನಿರ್ದೇಶಕರು, : ಸದಸ್ಯರು
   ಯೋಜನಾ ಇಲಾಖೆ, ಬೆಂಗಳೂರು
   (ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಪ್ರತಿನಿಧಿಗಳು

4. ಶ್ರೀ ಚಂದ್ರಶೇಖರ್, : ವಿಶೇಷ ಆಹ್ವಾನಿತರು
   ಸರ್ಕಾರದ ಉಪ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),
   ಬೆಂಗಳೂರು

5. ಡಾ. ಹರಸೂರು. ಎಸ್.ಎಸ್, : ಸದಸ್ಯರು
   ನಿರ್ದೇಶಕರು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
   ಆನಂದರಾವ್ ವೃತ್ತ, ಬೆಂಗಳೂರು

6. ಡಾ. ಕವಿತಾ ಪಾಟೀಲ್, : ಸದಸ್ಯರು
   ನಿರ್ದೇಶಕರು,
   ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
   ರಾಯಚೂರು

**ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ ಸಭೆ ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಮೊದಲಿಗೆ ವಿಷಯ ಸೂಚಿ ಸಂಖ್ಯೆ. 01ರಲ್ಲಿ ದಿನಾಂಕ 13.10.2015ರಂದು ಜರುಗಿದ ರಿಮ್ಸ್ ಸಂಸ್ಥೆಯ 10ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನ ವರದಿಯನ್ನು ಪರಿಶೀಲಿಸಿ, ಅನುಮೋದಿಸಲಾಯಿತು. ನಂತರ ಅಜೆಂಡವಾರು ವಿಷಯಗಳನ್ನು ಈ ಕೆಳಗಿನಂತೆ ಚರ್ಚಿಸಲಾಯಿತು.**

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ವಿಷಯ ಸೂಚಿ ಸಂಖ್ಯೆ:- 02 | ಕಿವಿ ಮೂಗು ಮತ್ತು ಗಂಟಲು ವಿಭಾಗಕ್ಕೆ ಅವಶ್ಯವಿರುವ ವಿವಿಧ ಉಪಕರಣಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ. |
|---|---|

ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಕಿವಿ ಮೂಗು ಮತ್ತು ಗಂಟಲು ವಿಭಾಗ ಇವರು ವಿಭಾಗಕ್ಕೆ ಸ್ನಾತಕೋತ್ತರ ಪದವಿ ಕೋರ್ಸ್‌ನ್ನು ಪ್ರಾರಂಭಿಸಲು ಮತ್ತು ರೋಗಿಗಳಿಗೆ ಉನ್ನತ ಮಟ್ಟದಲ್ಲಿ ಚಿಕಿತ್ಸೆ ನೀಡಲು ಉನ್ನತಿಕರಣಗೊಳಿಸಲು ಅವಶ್ಯವಿರುವ ಈ ಕೆಳಗೆ ನಮೂದಿಸಿದ ಉಪಕರಣಗಳನ್ನು ಖರೀದಿಸಿ ಪೂರೈಸುವಂತೆ ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಉಪಕರಣದ ಹೆಸರು | ಉಪಕರಣದ ಅಂದಾಜು ಮೊತ್ತ |
|---|---|---|
| 1 | **ENT Operating Microscope Accessories** | **4200000.00** |
| 2 | **Tympanometry** | **500000.00** |
| 3 | **ENT Head Light** | **280000.00** |
| 4 | **Fess – Endoscopes & Instruments Camera** | **5040000.00** |
| 5 | **ENT console Microdebrider** | **2200000.00** |
| 6 | **Facial N Nanitoring (Optional)** | **1700000.00** |
| 7 | **Paediatrics Ventilating Bronchoscope** | **1000000.00** |
| | **Grand Total** | **14920000.00** |

ಸದರಿ ಉಪಕರಣಗಳನ್ನು ಖರೀದಿಸಲು ಅಂದಾಜು ರೂ. 149.20 ಲಕ್ಷಗಳು ವೆಚ್ಚವಾಗುತ್ತದೆ. ದಿನಾಂಕ 23.03.2013 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 17ನೇ ಆಡಳಿತ ಮಂಡಳಿ ವಿಷಯಸೂಚಿ ಸಂಖ್ಯೆ 03ರಲ್ಲಿ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಉಪಕರಣ ಹಾಗು ಪೀಠೋಪಕರಣಗಳನ್ನು ರೂ. 18.00 ಕೋಟಿಗಳ ವೆಚ್ಚದಲ್ಲಿ ಖರೀದಿಸಲು ಅನುಮೋದನೆಯನ್ನು ಪಡೆಯಲಾಗಿರುತ್ತದೆ. ಉಳಿತಾಯವಾಗಿರುವ ರೂ. 18.00 ಕೋಟಿಗಳಲ್ಲಿ ಈ ಕೆಳಗಿನಂತೆ ಅನುದಾನವನ್ನು ಬಳಸಿಕೊಳ್ಳಲಾಗಿರುತ್ತದೆ.

| | | |
|---|---|---|
| 1) | ವೈದ್ಯಕೀಯ ಉಪಕರಣಗಳ ಖರೀದಿ | : ರೂ. 5,26,71,500/- |
| 2) | ಲಿನನ್ ಬೆಡ್ಡಿಂಗ್ | : ರೂ. 4035650/- |
| 3) | ಸಿಸಿಟಿವಿಗೆ ಸಂಬಂಧಿಸಿದ ಉಪಕರಣಗಳು | : ರೂ. 2,73,26,666/- |
| 4) | ಆಸ್ಪತ್ರೆಯ ಪೀಠೋಪಕರಣಗಳು | : ರೂ. 1,35,29,044/- |
| | ಒಟ್ಟು | : ರೂ. 9,75,62,460/- |

ರೂ. 18.00 ಕೋಟಿಗಳಲ್ಲಿ ಅನುದಾನದಲ್ಲಿ ರೂ. 9,75,62,460/- ಗಳನ್ನು ಬಳಕೆ ಮಾಡಿಕೊಳ್ಳಲಾಗಿದ್ದು, ಇನ್ನು ರೂ. 8,24.37.540/- ಗಳ ಅನುದಾನವು ಉಳಿತಾಯವಾಗಿರುತ್ತದೆ. ಕಾರಣ ರೂ. 1,49,20,000/- ಗಳ ವೆಚ್ಚದಲ್ಲಿ ಕಿವಿ ಮೂಗು ಮತ್ತು ಗಂಟಲು ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಅನುಮೋದನೆಯನ್ನು ನೀಡಲು ಹಾಗೂ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ), ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸಭೆಯ ತೀರ್ಮಾನ :–

ಕಿವಿ ಮೂಗು ಮತ್ತು ಗಂಟಲು ವಿಭಾಗಕ್ಕೆ ಸ್ನಾತಕೋತ್ತರ ಪದವಿ ಕೋರ್ಸ್‌ನ್ನು ಪ್ರಾರಂಭಿಸಲು ಅವಶ್ಯವಿರುವ ವಿವಿಧ ಉಪಕರಣಗಳನ್ನು ರೂ. 1,49,20,000/– ಗಳ ವೆಚ್ಚದಲ್ಲಿ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಹಾಗೂ ಈ ವೆಚ್ಚವನ್ನು ಉಳಿತಾಯವಾಗಿರುವ ರೂ. 8,24,37,540/– ಅನುದಾನದಿಂದ ಭರಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

ಹಾಗೂ ಈಗಾಗಲೇ ರಿಮ್ಸ್ ಸಂಸ್ಥೆಯಲ್ಲಿ ರೂ. 9,75,62,460/– ಗಳ ವೆಚ್ಚದಲ್ಲಿ ಖರೀದಿಸಲಾಗಿರುವ ವೈದ್ಯಕೀಯ ಉಪಕರಣಗಳು, ಲಿನನ್ ಬೆಡ್ಡಿಂಗ್, ಸಿಸಿಟಿವಿಗೆ ಸಂಬಂಧಿಸಿದ ಉಪಕರಣಗಳು ಹಾಗೂ ಆಸ್ಪತ್ರೆಯ ಪೀಠೋಪಕರಣಗಳ ಖರೀದಿಯ ಸಂಪೂರ್ಣ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ನಿರ್ದೇಶನ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ– 03 | ಸಿಟಿ ಸ್ಕ್ಯಾನ್ ಉಪಕರಣದ ಸಿ.ಎಂ.ಸಿ ಯನ್ನು ಮೆ॥ ಫಿಲಿಪ್ಸ್ ಇವರಿಂದ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ. |

ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ 16 **SLICE WHOLE BODY C.T SCANNER** ಉಪಕರಣವನ್ನು ಖರೀದಿಸಲಾಗಿದ್ದು, ವಾರಂಟಿ ಅವಧಿಯು, ಅಕ್ಟೋಬರ್ – 2015ಕ್ಕೆ ಪೂರ್ಣಗೊಂಡಿರುತ್ತದೆ. ಸದ್ಯ ಸರಬರಾಜುದಾರರು ಉಚಿತವಾಗಿ ಒಂದು ವರ್ಷದ ವಾರ್ಷಿಕ ನಿರ್ವಹಣೆಯನ್ನು ಮಾತ್ರ ನಿರ್ವಹಿಸುತ್ತಿದ್ದಾರೆ. ಈ ಒಂದು ವರ್ಷದ ಅವಧಿಯಲ್ಲಿ ಉಪಕರಣದ ದುರಸ್ಥಿಗೆ ಯಾವುದೇ ಬಿಡಿಭಾಗಗಳನ್ನು ಬದಲಾಯಿಸಬೇಕಾಗಿದ್ದಲ್ಲಿ, ಬಿಡಿಭಾಗಗಳ ಮೊತ್ತವನ್ನು ಪ್ರತ್ಯೇಕವಾಗಿ ಸಂದಾಯ ಮಾಡಬೇಕಾಗುತ್ತದೆ.

ಸದರಿ ಉಪಕರಣವನ್ನು ಅಕ್ಟೋಬರ್ 2013ರಲ್ಲಿ ಸ್ಥಾಪಿಸಲಾಗಿದ್ದು, ಮಾರ್ಚ್ – 2016ರ ಅಂತ್ಯಕ್ಕೆ ಒಟ್ಟು 7115 ಸಿಟಿ ಸ್ಕ್ಯಾನ್‌ಗಳನ್ನು ಮಾಡಲಾಗಿರುತ್ತದೆ. ಹಾಗೂ ಸದರಿ ಸಿಟಿ ಸ್ಕ್ಯಾನ್ ಉಪಕರಣದ ಸಿಟಿ ಟ್ಯೂಬ್‌ನ್ನು ಕೆಲವು ತಿಂಗಳ ನಂತರ ಬದಲಾಯಿಸಬೇಕಾದ ಸಂಭವವಿರುತ್ತದೆ. ಸಿಟಿ ಟ್ಯೂಬ್‌ನ್ನು ಪ್ರತ್ಯೇಕವಾಗಿ ಖರೀದಿಸಿದಲ್ಲಿ ಅಂದಾಜು ಮೊತ್ತ ರೂ. 30.00 ಲಕ್ಷಗಳಾಗುತ್ತದೆ. ಹಾಗೂ ಇನ್ನಿತರ ಬಿಡಿಭಾಗಗಳನ್ನು ಬದಲಾಯಿಸಬೇಕಾಗಿದ್ದಲ್ಲಿ ಪ್ರತ್ಯೇಕವಾಗಿ ಬಿಡಿಭಾಗಗಳಿಗೆ ಮೊತ್ತವನ್ನು ಸಂದಾಯ ಮಾಡಬೇಕಾಗುತ್ತದೆ.

ಈ ಹಿನ್ನಲೆಯಲ್ಲಿ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ರೇಡಿಯಾಲಜಿ ವಿಭಾಗ ಇವರ ಕೋರಿಕೆಯ ಮೇರೆಗೆ ಮೆ॥ ಫಿಲಿಫ್ಸ್ ಕಂಪನಿಯವರನ್ನು ಸಂಪರ್ಕಿಸಿ ಸಿಟಿ ಸ್ಕ್ಯಾನ್ ಉಪಕರಣದ ಸಿ.ಎಂ.ಸಿ ನಿರ್ವಹಣೆಯನ್ನು ಕೈಗೊಳ್ಳುವ ಬಗ್ಗೆ ಕೋರಲಾಗಿ ಸದರಿಯವರು ಸಿಟಿ ಸ್ಕ್ಯಾನ್ ಉಪಕರಣದ ಸಿ.ಎಂ.ಸಿ ಯನ್ನು ಕೈಗೊಳ್ಳುವುದಾಗಿ ಮತ್ತು ಸಿ.ಎಂಸಿ ಯನ್ನು ಕೈಗೊಳ್ಳಲು ವಾರ್ಷಿಕವಾಗಿ ರೂ. 28.00 ಲಕ್ಷಗಳಾಗುತ್ತದೆಯೆಂದು ತಿಳಿಸಿರುತ್ತಾರೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸದರಿ ಮೊತ್ತದಲ್ಲಿ ಸಿಟಿ ಟ್ಯೂಬ್‌ನ ಮೊತ್ತ ಮತ್ತು ಇತರ ಬಿಡಿಭಾಗಗಳ ಮೊತ್ತವು ಸಹ ಒಳಗೊಂಡಿರುತ್ತದೆ. ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ. 62334775412 ದಲ್ಲಿ ಸಂಗ್ರಹವಾಗಿರುವ ರೂ. 5,41,50,647/– ಗಳ ಅನುದಾನದಿಂದ ಈ ವೆಚ್ಚವನ್ನು ಭರಿಸಲಾಗುವುದು.

ಕಾರಣ ರೇಡಿಯಾಲಜಿ ವಿಭಾಗಕ್ಕೆ ಬರುವ ರೋಗಿಗಳ ಹಿತದೃಷ್ಟಿಯಿಂದ ಸಿಟಿ ಸ್ಕ್ಯಾನ್ ಉಪಕರಣದ ಸಿ.ಎಂ.ಸಿ ಪ್ರಸ್ತಾವನೆಯನ್ನು ದರಗಳ ಸಂಧಾನ ಜರುಗಿಸಿದ ನಂತರ ಮೆ॥ ಫಿಲಿಪ್ಸ್ ಇವರಿಂದ ಕೈಗೊಳ್ಳುವ ಬಗ್ಗೆ ಹಾಗೂ ಈ ವೆಚ್ಚವನ್ನು ಬಳಕೆದಾರರ ನಿಧಿಯಿಂದ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಿಮ್ಸ್ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗದಲ್ಲಿರುವ 16 **SLICE WHOLE BODY C.T SCANNER** ಉಪಕರಣಕ್ಕೆ ಸಿ.ಎಂ.ಸಿ ಯನ್ನು ನೀಡುವ ಬದಲಾಗಿ, ಒಂದು ವರ್ಷದ ಅವಧಿಗೆ ಎ.ಎಂ.ಸಿ ಯನ್ನು ಮೆ॥ ಫಿಲಿಫ್ಸ್ ಇವರಿಂದ ಕೈಗೊಳ್ಳುವ ಬಗ್ಗೆ ಆರ್ಥಿಕ ಸಮಿತಿಯು ಅನುಮೋದನೆ ನೀಡಿತು. ಹಾಗೂ ಅವಶ್ಯವಿದ್ದಲ್ಲಿ ಈ ವೆಚ್ಚವನ್ನು ಬಳಕೆದಾರರ ನಿಧಿಯಿಂದ ಪಾವತಿಸಲು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 04 | ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಅವಶ್ಯವಿರುವ ವೈದ್ಯಕೀಯ ಪುಸ್ತಕಗಳು ಹಾಗೂ ಜರ್ನಲ್ಸ್‌ಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ. |

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ 2015ನೇ ಸಾಲಿಗೆ ವಿವಿಧ ವಿಭಾಗಗಳಿಗೆ ಅವಶ್ಯ ಜರ್ನಲ್‌ಗಳನ್ನು ಮತ್ತು ವೈದ್ಯಕೀಯ ಪುಸ್ತಕಗಳನ್ನು ಖರೀದಿಸಬೇಕಾಗಿದೆ. ತಪ್ಪಿದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ನ್ಯೂನತೆಯನ್ನಾಗಿ ಪರಿಗಣಿಸುವ ಸಾಧ್ಯತೆಯಿರುತ್ತದೆ. ಈ ಹಿಂದೆ 2013 ಮತ್ತು 2014 ನೇ ಸಾಲಿನ ಜರ್ನಲ್ಸ್‌ಗಳನ್ನು ಖರೀದಿಸದೇ ಇರುವುದರಿಂದ ಭಾರತೀಯ ವೈದ್ಯಕೀಯ ಮಂಡಳಿಯು ನ್ಯೂನತೆಯನ್ನಾಗಿ ಪರಿಗಣಿಸಲಾಗಿತ್ತು. ಕಾರಣ 2013 ಮತ್ತು 2014 ನೇ ಸಾಲಿನ ಜರ್ನಲ್ಸ್‌ಗಳನ್ನು ಹಣಕಾಸು ಸಮಿತಿ ಸಭೆಯ ಅನುಮೋದನೆಯಂತೆ ಮೆ॥ ಬಿಬ್ಲಿಯೋಮ್ಯಾಟಿಕ್ಸ್, ಬೆಂಗಳೂರು ಇವರಿಂದ ಜರ್ನಲ್ಸ್‌ಗಳ ಖರೀದಿಯ ನವೀಕರಣ ಮಾಡಲಾಗಿತ್ತು. 2015ನೇ ಸಾಲಿನ ಅವಶ್ಯ ಜರ್ನಲ್ಸ್‌ಗಳನ್ನು ಮುಂದಿನ ಭಾರತೀಯ ವೈದ್ಯಕೀಯ ಮಂಡಳಿಯ ಪರಿವೀಕ್ಷಣೆಯ ಪೂರ್ವದಲ್ಲಿ ಜರ್ಜಲ್ಸ್ ಮತ್ತು ವೈದ್ಯಕೀಯ ಪುಸ್ತಕಗಳನ್ನು ಖರೀದಿಸಬೇಕಾಗಿರುತ್ತದೆ.

2015ನೇ ಸಾಲಿನ ಅವಶ್ಯ ಜರ್ನಲ್ಸ್‌ಗಳನ್ನು ನವೀಕರಿಸಲು ಅಂದಾಜು ಮೊತ್ತ ರೂ. 80.00 ಲಕ್ಷಗಳು ಮತ್ತು 2015ನೇ ಸಾಲಿನ ಅವಶ್ಯ ಪುಸ್ತಕಗಳನ್ನು ಖರೀದಿಸಲು ಅಂದಾಜು ರೂ. 50.00 ಲಕ್ಷಗಳು ಗಳಾಗುತ್ತಿದ್ದು, ಒಟ್ಟು ರೂ. 130.00 ಲಕ್ಷಗಳು ವೆಚ್ಚವಾಗುತ್ತದೆ. ಈ ವೆಚ್ಚವನ್ನು 2014–15ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210–05–105–1–54–101 ಯೋಜನೇತರ ಅಡಿಯಲ್ಲಿ ಸಿಬ್ಬಂದಿ ವೇತನ ಹಾಗೂ ಇತರ ವೆಚ್ಚಕ್ಕೆ ಬಿಡುಗಡೆಯಾಗಿ ಉಳಿತಾಯವಾಗಿರುವ ರೂ. 6,47,76,360/– ಗಳ ಅನುದಾನದಿಂದ ಭರಿಸಲಾಗುವುದು.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಕಾರಣ ಈ ಸಂಸ್ಥೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಭಾರತೀಯ ವೈದ್ಯಕೀಯ ಮಂಡಳಿಯ ಅನುಮೋದನೆಯ ಸಂಬಂಧ ಅವಶ್ಯವಿರುವ 2015ನೇ ಸಾಲಿನ ವಿವಿಧ ಜರ್ನಲ್ಸ್‌ಗಳನ್ನು ಮೆ॥ ಬಿಬ್ಲಿಯೋಮ್ಯಾಟಿಕ್ಸ್, ಬೆಂಗಳೂರು ಇವರಿಂದ ನವೀಕರಿಸಲು ಮತ್ತು ವೈದ್ಯಕೀಯ ಪುಸ್ತಕಗಳನ್ನು ವಿತರಕರು ಮತ್ತು ಪ್ರಕಾಶಕರಿಂದ ಪ್ರದರ್ಶನ ನೆರವೇರಿಸಿ ಅತಿ ಹೆಚ್ಚಿಗೆ ರಿಯಾಯಿತಿ ನೀಡುವ ವಿತರಕರು ಹಾಗೂ ಪ್ರಕಾಶಕರಿಂದ ಅವಶ್ಯ ವೈದ್ಯಕೀಯ ಪುಸ್ತಕಗಳನ್ನು ಗುಡ್ ಆಫೀಸ್ ಕಮಿಟಿ ನಿರ್ದೇಶನದನ್ವಯ ಪ್ರಕಾಶಕರಿಂದ ಖರೀದಿಸಿ ಪೂರೈಸಲು ಹಾಗೂ ಒಟ್ಟು ರೂ. 130.00 ಲಕ್ಷಗಳ ವೆಚ್ಚವನ್ನು 2014-15ನೇ ಸಾಲಿನ ಲೆಕ್ಕ ಶಿರ್ಷಿಕೆ 2210-05-105-1-54-101 ಯೋಜನೇತರ ಅಡಿಯಲ್ಲಿ ಬಿಡುಗಡೆಯಾಗಿ ಉಳಿತಾಯವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ಲೆಕ್ಕಶಿರ್ಷಿಕೆ | 2014-15ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ | ಒಟ್ಟು ಖರ್ಚಾದ ಅನುದಾನ | ಬಾಕಿ ಉಳಿದ ಅನುದಾನ |
|---|---|---|---|---|
| 1 | 2210-05-105-1-54-101 (ಯೋಜನೆ) | 91908000 | 91908000 | 0 |
| 2 | 2210-05-105-1-54-101 (ಯೋಜನೇತರ) | 225200000 | 156919011 | 68280989 |
| | | 317108000 | 248827011 | 68280989 |

ಸಭೆಯ ತೀರ್ಮಾನ :-

ಭಾರತೀಯ ವೈದ್ಯಕೀಯ ಮಂಡಳಿಯ ನ್ಯೂನತೆಯನ್ನು ಸರಿಪಡಿಸಲು 2015ನೇ ಸಾಲಿನ ವಿವಿಧ ಜರ್ನಲ್ಸ್‌ಗಳನ್ನು ಮೆ॥ ಬಿಬ್ಲಿಯೋಮ್ಯಾಟಿಕ್ಸ್, ಬೆಂಗಳೂರು ಇವರಿಂದ ನವೀಕರಿಸಲು ಮತ್ತು ವೈದ್ಯಕೀಯ ಪುಸ್ತಕಗಳನ್ನು ವಿತರಕರು ಮತ್ತು ಪ್ರಕಾಶಕರಿಂದ ಪ್ರದರ್ಶನ ನೆರವೇರಿಸಿ ಅತಿ ಹೆಚ್ಚಿಗೆ ರಿಯಾಯಿತಿ ನೀಡುವ ವಿತರಕರು ಹಾಗೂ ಪ್ರಕಾಶಕರಿಂದ ಅವಶ್ಯ ವೈದ್ಯಕೀಯ ಪುಸ್ತಕಗಳನ್ನು ಗುಡ್ ಆಫೀಸ್ ಕಮಿಟಿ ನಿರ್ದೇಶನದನ್ವಯ ಪ್ರಕಾಶಕರಿಂದ ಖರೀದಿಸಿ ಪೂರೈಸಿಕೊಳ್ಳಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಹಾಗೂ ಜರ್ನಲ್ಸ್ ಮತ್ತು ವೈದ್ಯಕೀಯ ಪುಸ್ತಕಗಳನ್ನು ಖರೀದಿಸಲು ಅವಶ್ಯವಿರುವ ರೂ. 130.00 (80 ಲಕ್ಷ ಜರ್ನಲ್ಸ್ + 50 ಲಕ್ಷ ವೈದ್ಯಕೀಯ ಪುಸ್ತಕಗಳು) ಲಕ್ಷಗಳ ಅನುದಾನವನ್ನು 2014-15ನೇ ಸಾಲಿನ ಲೆಕ್ಕ ಶಿರ್ಷಿಕೆ 2210-05-105-1-54-101 ಯೋಜನೇತರ ಅಡಿಯಲ್ಲಿ ಬಿಡುಗಡೆಯಾಗಿ ಉಳಿತಾಯವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿಯು ಅನುಮತಿ ನೀಡಲಾಯಿತು.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ವಿಷಯ ಸೂಚಿ ಸಂಖ್ಯೆ– 05 | ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆಯನ್ನು ಮೆ॥ ಜಾನ್ಸನ್ ಲಿಫ್ಟ್ಸ್ ಕಂಪನಿ ಲಿಮಿಟೆಡ್ ಇವರಿಂದ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ. |
|---|---|

ಸರ್ಕಾರದ ಆದೇಶ ಸಂಖ್ಯೆ ಆಕುಕ / 126 / ಎಂಎಸ್ಎಫ್ / 2011 ದಿನಾಂಕ 02.11.2011 ರನ್ವಯ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಲಿಫ್ಟ್‌ಗಳನ್ನು ಅಳವಡಿಸಲು ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಲೋಕೋಪಯೋಗಿ ಇಲಾಖೆಗೆ ನಿಯಮಾನುಸಾರ ಟೆಂಡರ್ ಕರೆದು ಲಿಫ್ಟ್‌ಗಳನ್ನು ಅಳವಡಿಸುವಂತೆ ಕೋರಲಾಗಿತ್ತು. ಸದರಿಯವರು ನಿಯಮಾನುಸಾರ ಟೆಂಡರ್ ಆಹ್ವಾನಿಸಿ, ಟೆಂಡರ್‌ನಲ್ಲಿ ಯಶಸ್ವಿಯಾದ ಮೆ॥ ಹೈಯಗ್ರೀವ ಇನ್‌ಫ್ರಾಟೆಕ್ ಪ್ರಾಜೆಕ್ಟ್ ಲಿಮಿಟೆಡ್ ಇವರಿಂದ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಒಟ್ಟು 13 ಜಾನ್ಸನ್ ಲಿಫ್ಟ್‌ಗಳನ್ನು ಅಳವಡಿಸಲಾಗಿರುತ್ತದೆ. ಅವುಗಳ ವಿವರ ಹಾಗೂ ಲಿಫ್ಟ್‌ಗಳ ಕಾರ್ಯನಿರ್ವಹಣೆಯ ಅವಧಿಯ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಸ್ಥಳ | ಲಿಫ್ಟ್ಸ್ ನಂಬರ್ | ನಿರ್ವಹಣಾ ಅವಧಿ |
|---|---|---|---|
| 1 | ಬೋಧಕ ಸಿಬ್ಬಂದಿಗಳ ವಸತಿ ಸಮುಚ್ಚಯ – 1 | ಜಿ – 5171 | 03.02.2015 ರಿಂದ 02.02.2016 |
| 2 | ಬೋಧಕ ಸಿಬ್ಬಂದಿಗಳ ವಸತಿ ಸಮುಚ್ಚಯ – 2 | ಜಿ – 5172 | 29.08.2015 ರಿಂದ 28.08.2016 |
| 3 | ವಿದ್ಯಾರ್ಥಿಗಳ ವಸತಿ ಸಮುಚ್ಚಯ – 1 | ಜಿ – 5173 | 13.05.2015 ರಿಂದ 12.05.2016 |
| 4 | ವಿದ್ಯಾರ್ಥಿಗಳ ವಸತಿ ಸಮುಚ್ಚಯ – 2 | ಜಿ – 5174 | 15.08.2015 ರಿಂದ 15.08.2016 |
| 5 | ವಿದ್ಯಾರ್ಥಿನಿಯರ ವಸತಿ ಸಮುಚ್ಚಯ – 1 | ಜಿ – 5175 | 13.05.2015 ರಿಂದ 12.05.2016 |
| 6 | ವಿದ್ಯಾರ್ಥಿನಿಯರ ವಸತಿ ಸಮುಚ್ಚಯ – 2 | ಜಿ – 5176 | 15.08.2015 ರಿಂದ 15.08.2016 |
| 7 | ಗ್ರೂಪ್ "ಡಿ" ವಸತಿ ಸಮುಚ್ಚಯ | ಜಿ – 5177 | 20.10.2014 ರಿಂದ 30.10.2015 |
| 8 | ಗ್ರೂಪ್ "ಸಿ" ವಸತಿ ಸಮುಚ್ಚಯ | ಜಿ – 5178 | 09.11.2014 ರಿಂದ 08.11.2015 |
| 9 | ಆಡಿಟೋರಿಯಮ್ ಗೇಟ್ | ಜಿ – 5179 | 07.12.2014 ರಿಂದ 06.12.2015 |
| 10 | ರಿಮ್ಸ್ ಕಾಲೇಜ್ (ಎ.ಟಿ.ಎಂ – 1) | ಜಿ – 5180 | 13.05.2015 ರಿಂದ 12.05.2016 |
| 11 | ರಿಮ್ಸ್ ಕಾಲೇಜ್ (ಎ.ಟಿ.ಎಂ – 2) | ಜಿ – 5181 | 13.05.2015 ರಿಂದ 12.05.2016 |
| 12 | ಮಿನಿ ಆಡಿಟೋರಿಯಮ್ – 1 | ಜಿ – 5182 | 29.08.2015 ರಿಂದ 28.08.2016 |
| 13 | ಮಿನಿ ಆಡಿಟೋರಿಯಮ್ – 2 | ಜಿ – 5183 | 29.08.2015 ರಿಂದ 28.08.2016 |

ಮೆ॥ ಜಾನ್ಸನ ಲಿಫ್ಟ್ಸ್ ಇವರು ಬಹುತೇಕ ಲಿಫ್ಟ್‌ಗಳ ಅವಧಿಯ ನಿರ್ವಹಣಾ ಅವಧಿಯು ಮುಕ್ತಾಯಗೊಂಡಿರುವುದರಿಂದ ಮುಂದಿನ ಅವಧಿಗೆ ಲಿಫ್ಟ್‌ಗಳ ನಿರ್ವಹಣಾ ಅವಧಿಯನ್ನು ನವೀಕರಿಸುವಂತೆ ಕೋರಿ ಪ್ರಸ್ತುತ ನಾಲ್ಕು ಲಿಫ್ಟ್‌ಗಳ ನಿರ್ವಹಣೆಗೆ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಅದರ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಸ್ಥಳ | ಲಿಫ್ಟ್ಸ್ ನಂಬರ್ | ನಿರ್ವಹಣೆ ನವೀಕರಿಸುವ ಅವಧಿ | ನಿರ್ವಹಣೆಯ ಮೊತ್ತ |
|---|---|---|---|---|
| 1 | ಬೋಧಕ ಸಿಬ್ಬಂದಿಗಳ ವಸತಿ ಸಮುಚ್ಚಯ –1 | ಜಿ – 5171 | 03.02.2016 ರಿಂದ 31.01.2017 | 65,921/– |
| 2 | ಗ್ರೂಪ್ "ಡಿ" ವಸತಿ ಸಮುಚ್ಚಯ | ಜಿ – 5177 | 01.02.2016 ರಿಂದ 31.01.2017 | 1,09,812/– |
| 3 | ಗ್ರೂಪ್ "ಸಿ" ವಸತಿ ಸಮುಚ್ಚಯ | ಜಿ – 5178 | 01.02.2016 ರಿಂದ 31.01.2017 | |
| 4 | ಆಡಿಟೋರಿಯಮ್ ಗೇಟ್ | ಜಿ – 5179 | 01.02.2016 ರಿಂದ 31.01.2017 | 80,461/– |
| | | | **ARD Battery (12V-18AH)** | 12,600/– |
| | ಒಟ್ಟು ನಾಲ್ಕು ಲಿಫ್ಟ್‌ಗಳ ನಿರ್ವಹಣೆಯ ಮೊತ್ತ | | | 2,68,794/– |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸರ್ಕಾರದ ಆದೇಶ ಸಂಖ್ಯೆ ಆಕುಕ / 126/ ಎಂಎಸ್ಎಫ್ / 2011 ದಿನಾಂಕ 25.11.2013ರನ್ವಯ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಲಿಫ್ಟ್‌ಗಳನ್ನು ಅಳವಡಿಸಲು ರೂ. 4,00,00,000/- ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಬಿಡುಗಡೆ ಮಾಡಲಾದ ಅನುದಾನದಲ್ಲಿ ಈವರೆಗೆ ಗುತ್ತಿಗೆದಾರರಿಗೆ ಒಟ್ಟು ರೂ. 3,89,30,251/- ಗಳನ್ನು ಪಾವತಿಸಲಾಗಿದ್ದು, ರಿಮ್ಸ್ ಸಂಸ್ಥೆಯ ಖಾತೆ ಸಂಖ್ಯೆ 62006895732 ರಲ್ಲಿ ರೂ. 10,69,749/- ಗಳ ಅನುದಾನವು ಉಳಿತಾಯವಾಗಿ ಲಭ್ಯವಿರುತ್ತದೆ.

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಅಳವಡಿಸಲಾಗಿರುವ ಎಲ್ಲಾ ಲಿಫ್ಟ್‌ಗಳು ಮೆ॥ ಜಾನ್ಸ್ ಲಿಫ್ಟ್ ಕಂಪನಿಯದಾಗಿದ್ದು, ಲಿಫ್ಟ್‌ಗಳು ದುರಸ್ಥಿಗೆ ಬಂದಂತಹ ಸಮಯದಲ್ಲಿ ಬೇರೆ ಕಂಪನಿಯ ಲಿಫ್ಟ್ ಸಾಮಾಗ್ರಿಗಳು ಜಾನ್ಸ್ ಕಂಪನಿಯ ಲಿಫ್ಟ್‌ಗಳಿಗೆ ಹೊಂದಾಣಿಕೆಯಾಗುವುದಿಲ್ಲ. ಹಾಗೂ ಲಿಫ್ಟ್‌ಗಳನ್ನು ಸರಬರಾಜು ಮಾಡಿರುವ ಸರಬರಾಜುದಾರರೇ ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸುವುದು ಸೂಕ್ತವಾಗಿರುತ್ತದೆ

ಕಾರಣ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದ ಎಲ್ಲಾ ಕಟ್ಟಡಗಳು ಬಹುಮಹಡಿ ಕಟ್ಟಡಗಳಾಗಿರುವುದರಿಂದ, ಲಿಫ್ಟ್‌ಗಳು ತೊಂದರೆಗೆ ಸಿಲುಕಿದ ಸಂಧರ್ಭದಲ್ಲಿ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತದೆ. ಈ ಹಿನ್ನಲೆಯಲ್ಲಿ ಸದರಿ ಲಿಫ್ಟ್‌ಗಳ ನಿರ್ವಹಣೆಯನ್ನು ಕೈಗೊಳ್ಳುವುದು ಅತಿ ಅವಶ್ಯಕವಾಗಿರುತ್ತದೆ.

ಕಾರಣ ಮೆ॥ ಜಾನ್ಸ್ ಲಿಫ್ಟ್ ಲಿಮಿಟೆಡ್ ಇವರು ಪ್ರಸ್ತುತ ಸಲ್ಲಿಸಿರುವ 04 ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆಗೆ ಸಲ್ಲಿಸಿರುವ ಅಂದಾಜು ಪಟ್ಟಿಯ ಮೊತ್ತ ರೂ. 2,68,794/- ವೆಚ್ಚದಲ್ಲಿ ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸಲು ಹಾಗೂ ಬಾಕಿ ಉಳಿದ 09 ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆಯನ್ನು ವಾರೆಂಟಿ ಅವಧಿಯು ಮುಗಿದ ನಂತರ ಮೆ॥ ಜಾನ್ಸ್ ಲಿಫ್ಟ್ ಲಿಮಿಟೆಡ್ ಇವರಿಂದ ಅಂದಾಜು ಪಟ್ಟಿ ಪಡೆದು ವಾರ್ಷಿಕ ನಿರ್ವಹಣೆಯನ್ನು ಕೈಗೊಳ್ಳುವ ಬಗ್ಗೆ ಹಾಗೂ ಈ ವೆಚ್ಚವನ್ನು ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಲಿಫ್ಟ್ ಅಳವಡಿಸುವ ಕಾಮಗಾರಿಗೆ ಬಿಡುಗಡೆ ಮಾಡಿ ಉಳಿತಾಯವಾಗಿರುವ ರೂ. 10,69,749/- ಗಳ ಅನುದಾನದಿಂದ ಪಾವತಿಸುವ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಅಳವಡಿಸಲಾಗಿರುವ ಒಟ್ಟು 13 ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆಯನ್ನು ಕೈಗೊಳ್ಳುವ ಬಗ್ಗೆ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಲಿಫ್ಟ್‌ಗಳ ವಾರ್ಷಿಕ ನಿರ್ವಹಣೆಯನ್ನು ಕೈಗೊಳ್ಳಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಲಿಫ್ಟ್ ಅಳವಡಿಸುವ ಕಾಮಗಾರಿಗೆ ಬಿಡುಗಡೆ ಮಾಡಿ ಉಳಿತಾಯವಾಗಿರುವ ರೂ. 10,69,749/- ಗಳ ಅನುದಾನದಿಂದ ಪಾವತಿಸಲು ಅನುಮತಿ ನೀಡಲಾಯಿತು.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ವಿಷಯ ಸೂಚಿ ಸಂಖ್ಯೆ –06 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅವಶ್ಯವಿರುವ ಹೆಚ್ಚುವರಿ ಬೋಧಕ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ |
|---|---|

ಸರ್ಕಾರದ ಆದೇಶ ಸಂಖ್ಯೆ ಆಕುಕ / 266 / ಎಂಪಿಎಸ್ / 2006 ದಿನಾಂಕ 07.09.2006 ಮತ್ತು ಸರ್ಕಾರದ ಆದೇಶ ಸಂಖ್ಯೆ ಆಕುಕ / 204 / ಎಂಎಂಇ / 2012 ದಿನಾಂಕ 16.08.2014 ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 233 ಬೋಧಕ ಸಿಬ್ಬಂದಿ ಹುದ್ದೆಗಳನ್ನು ಮಂಜೂರು ಮಾಡಲಾಗಿದ್ದು, ದಿನಾಂಕ ಭಾರತೀಯ ವೈದ್ಯಕೀಯ ಮಂಡಳಿಯು 16.12.2015 ರಂದು ಪ್ರಿ – ಪಿಜಿ ಪರಿವೀಕ್ಷಣೆಯ ಸಂಧರ್ಭದಲ್ಲಿ ವೈದ್ಯಶಾಸ್ತ್ರ ವಿಭಾಗ, ಶಸ್ತ್ರಚಿಕಿತ್ಸಾ ವಿಭಾಗ ಮತ್ತು ಅರವಳಿಕೆ ವಿಭಾಗದಲ್ಲಿನ 03 ಸಹ ಪ್ರಾಧ್ಯಾಪಕರು ಹಾಗೂ 07 ಸಹಾಯಕ ಪ್ರಾಧ್ಯಾಪಕರು ಕೊರತೆಯಾಗಿರುತ್ತಾರೆಂದು ಗುರುತಿಸಿರುತ್ತಾರೆ. ಭಾರತೀಯ ವೈದ್ಯಕೀಯ ಮಂಡಳಿಯ ಮಾನ್ಯತೆ ಪಡೆಯಲು ಎಂಸಿಐ ಗುರುತಿಸಿರುವ ನ್ಯೂನತೆಗಳನ್ನು ಸರಿಪಡಿಸಿಲು ಈ ಕೆಳಗಿನಂತೆ ಸಹ ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸೃಜಿಸುವುದು ಅತಿ ಅವಶ್ಯಕವಾಗಿರುತ್ತದೆ.

| | ಸರ್ಕಾರದಿಂದ ಮಂಜೂರಾದ ಹುದ್ದೆಗಳ ವಿವರ | | ಸೃಜಿಸಬೇಕಾದ ಹುದ್ದೆಗಳ ವಿವರ | | | | ಒಟ್ಟು | ಜಸ್ಟಿಫೀಕೇಶನ್ |
|---|---|---|---|---|---|---|---|---|
| | | | ಪದನಾಮ | ವೈದ್ಯಶಾಸ್ತ್ರ ವಿಭಾಗ | ಶಸ್ತ್ರಚಿಕಿತ್ಸಾ ವಿಭಾಗ | ಅರವಳಿಕೆ ವಿಭಾಗ | | |
| ಬೋಧಕ ಸಿಬ್ಬಂದಿ ಹುದ್ದೆಗಳ ವಿವರ | ಪ್ರಾಧ್ಯಾಪಕರು | 21 | | | | | | |
| | ಸಹ ಪ್ರಾಧ್ಯಾಪಕರು | 31 | ಸಹ ಪ್ರಾಧ್ಯಾಪಕರು | 01 | 01 | 01 | 03 | ಭಾರತೀಯ ವೈದ್ಯಕೀಯ ಮಂಡಳಿಯ ಮಾನ್ಯತೆ ಪಡೆಯಲು 03 ಸಹ ಪ್ರಾಧ್ಯಾಪಕರು ಹಾಗೂ 07 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸೃಜಿಸಬೇಕಾಗಿರುತ್ತದೆ |
| | ಸಹಾಯಕ ಪ್ರಾಧ್ಯಾಪಕರು | 43 | ಸಹಾಯಕ ಪ್ರಾಧ್ಯಾಪಕರು | 03 | 03 | 01 | 07 | |
| | ಬೋಧಕರು | 34 | | | | | | |
| | ಹಿರಿಯ ಸ್ಥಾನಿಕರು | 46 | | | | | | |
| | ಕಿರಿಯ ಸ್ಥಾನಿಕರು | 58 | | | | | | |
| | ಒಟ್ಟು | 233 | | | | | | |

ಕಾರಣ ಭಾರತೀಯ ವೈದ್ಯಕೀಯ ಮಂಡಳಿಯು ಗುರುತಿಸಿರುವ ಬೋಧಕ ಸಿಬ್ಬಂದಿಗಳ ಕೊರತೆಯನ್ನು ಸರಿಪಡಿಸಲು ಅವಶ್ಯವಿರುವ ವಿವಿಧ ವಿಭಾಗಗಳ ಒಟ್ಟು 03 ಸಹ ಪ್ರಾಧ್ಯಾಪಕರ ಹುದ್ದೆಗಳನ್ನು ಹಾಗೂ 07 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸೃಜಿಸಿಕೊಳ್ಳಲು ಅನುಮತಿ ನೀಡುವಂತೆ ಆರ್ಥಿಕ ಸಮಿತಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಭಾರತೀಯ ವೈದ್ಯಕೀಯ ಮಂಡಳಿಯು ಗುರುತಿಸಿರುವ ಬೋಧಕ ಸಿಬ್ಬಂದಿಗಳ ಕೊರತೆಯನ್ನು ಸರಿಪಡಿಸಲು ಅವಶ್ಯವಿರುವ ಈ ಕೆಳಕಂಡ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸಿಕೊಳ್ಳಲು ಆರ್ಥಿಕ ಸಮಿತಿಯು ಅನುಮೋದೆಯನ್ನು ನೀಡಲಾಯಿತು. ಹಾಗೂ ಸದರಿ ಹುದ್ದೆಗಳ ಸೃಜನೆಯ ಸಂಬಂಧ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ನಿರ್ದೇಶನ ನೀಡಲಾಯಿತು.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ಕ್ರಮ ಸಂಖ್ಯೆ | ವಿಭಾಗದ ಹೆಸರು | ಪದನಾಮ | |
|---|---|---|---|
| | | ಸಹಾಯಕ ಪ್ರಾಧ್ಯಾಪಕರು | ಸಹ ಪ್ರಾಧ್ಯಾಪಕರು |
| 1 | ವೈದ್ಯಶಾಸ್ತ್ರ ವಿಭಾಗ | 03 | 01 |
| 2 | ಶಸ್ತ್ರ ಚಿಕಿತ್ಸಾ ವಿಭಾಗ | 03 | 01 |
| 3 | ಅರವಳಿಕೆ ವಿಭಾಗ | 01 | 01 |
| | ಒಟ್ಟು ಹುದ್ದೆಗಳು | 07 | 03 |

| | |
|---|---|
| ವಿಷಯ ಸೂಚಿ ಸಂಖ್ಯೆ.- 07 | ರಿಮ್ಸ್ ಬೋಧಕ ಆಸ್ಪತ್ರೆಯ ಕ್ಯಾಂಟೀನ್‌ನ ಟೆಂಡರ್ ಅವಧಿ ಮುಕ್ತಾಯಗೊಳ್ಳುತ್ತಿದ್ದು, ಹೊಸದಾಗಿ ಟೆಂಡರ್ ಕರೆಯಲು ಅನುಮತಿ ನೀಡುವ ಬಗ್ಗೆ. |

ರಿಮ್ಸ್ ಬೋಧಕ ಆಸ್ಪತ್ರೆಯ ಕಟ್ಟಡದಲ್ಲಿ 546.76 ಚದುರ ಮೀಟರ್ ಸ್ಥಳವನ್ನು ಕ್ಯಾಂಟೀನ್‌ಗಾಗಿ ಸಂಬಂಧ ಕಲ್ಪಿಸಲಾಗಿದ್ದು, ದಿನಾಂಕ 23.06.2013 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 17ನೇ ಆಡಳಿತ ಮಂಡಳಿಯ ಅನುಮೋದನೆ ಪಡೆದು ನಿಯಮಾನುಸಾರ ಇ – ಟೆಂಡರ್ ಆಹ್ವಾನಿಸಿ, ಟೆಂಡರ್‌ನಲ್ಲಿ ಯಶಸ್ವಿಯಾದ ಮೆ॥ ಮಾರುತಿ ಏಜನ್ಸಿಸ್, ರಾಯಚೂರು ಇವರಿಗೆ ಈ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್ / ಸಾಮಾನ್ಯ / 2013-14 / 156 ದಿನಾಂಕ 26.11.2013 ರನ್ವಯ ರಿಮ್ಸ್ ಬೋಧಕ ಆಸ್ಪತ್ರೆಯು ಪ್ರಾರಂಭವಾದ ದಿನಾಂಕದಿಂದ ಮುಂದಿನ ಎರಡು ವರ್ಷಗಳ ಅವಧಿಗೆ (ದಿನಾಂಕ 24.11.2014 ರಿಂದ ದಿನಾಂಕ 25.11.2016) ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಅದರ ಅವಧಿಯು ದಿನಾಂಕ 25.11.2016ಕ್ಕೆ ಕೊನೆ ಗೊಳ್ಳುತ್ತಿರುವ ಹಿನ್ನಲೆಯಲ್ಲಿ ಮನಃ ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ. ಹಾಗೂ ಅದೇ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿಯೂ ಸಹ ಕ್ಯಾಂಟೀನ್‌ಗಾಗಿ ಸ್ಥಳವಾಕಾಶವನ್ನು ಕಲ್ಪಿಸಲಾಗಿದ್ದು ಟೆಂಡರ್ ಕರೆಯಬೇಕಾಗಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಜಿಲ್ಲೆಯ ವಿವಿಧ ಮೂಲೆಗಳಿಂದ ಚಿಕಿತ್ಸೆ ಬಯಸಿ ಬರುವ ರೋಗಿಗಳ ಹಿತದೃಷ್ಟಿಯಿಂದ, ಸಿಬ್ಬಂದಿಗಳ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಅನುಕೂಲವಾಗುವ ಹಿನ್ನಲೆಯಲ್ಲಿ ರಿಮ್ಸ್ ಬೋಧಕ ಆಸ್ಪತ್ರೆಯ ಕ್ಯಾಂಟೀನ್ ಮತ್ತು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕ್ಯಾಂಟೀನ್‌ನ್ನು ನಿರ್ವಹಿಸಲು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ ಒಂದು ವರ್ಷದ ಅವಧಿಗೆ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯ ಕ್ಯಾಂಟೀನ್ ಮತ್ತು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕ್ಯಾಂಟೀನ್‌ನ್ನು ನಿರ್ವಹಿಸಲು ಎರಡು ಸಂಸ್ಥೆಗಳಿಗೆ ಒಂದೇ ಟೆಂಡರ್‌ನ್ನು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ ಒಂದು ವರ್ಷದ ಅವಧಿಗೆ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| (ಡಾ. ಕವಿತಾ ಪಾಟೀಲ್), | (ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ |
| ನಿರ್ದೇಶಕರು | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ, |
| ರಾಯಚೂರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, |
| | ವೈದ್ಯಕೀಯ ಶಿಕ್ಷಣ, ಬೆಂಗಳೂರು |

| ವಿಷಯ ಸೂಚಿ ಸಂಖ್ಯೆ– 08 | ರಿಮ್ಸ್ ಬೋಧಕ ಆಸ್ಪತ್ರೆಯ ಕುಡಿಯುವ ನೀರಿನ ತೊಟ್ಟಿಯಿಂದ ಆಸ್ಪತ್ರೆಯ ಸಿಂಟೆಕ್ಸ್‌ಗಳಿಗೆ ನೀರನ್ನು ಸರಬರಾಜು ಮಾಡಲು ಹೊಸದಾಗಿ 4. ಇಂಚ್ ಪೈಪ್‌ಲೈನನ್ನು ಅಳವಡಿಸಲು ಅನುಮತಿ ನೀಡುವ ಬಗ್ಗೆ. |
|---|---|

ರಿಮ್ಸ್ ಬೋಧಕ ಆಸ್ಪತ್ರೆಗೆ ಕೃಷ್ಣಾ ನದಿಯಿಂದ ರಾಯಚೂರು ನಗರಕ್ಕೆ ನೀರು ಸರಬರಾಜು ಮಾಡುವ ಪೈಪ್‌ಲೈನ್‌ನಿಂದ ನೀರಿನ ಸಂಪರ್ಕವನ್ನು ಪಡೆಯಲಾಗಿದ್ದು, ಸರಬರಾಜು ಆಗುವ ನದಿಯ ನೀರನ್ನು 5.00 ಲಕ್ಷ ಲೀಟರ್ ಸಾಮಾರ್ಥ್ಯದ ನೀರಿನ ತೊಟ್ಟಿಯಲ್ಲಿ ಸಂಗ್ರಹಿಸಲಾಗುತ್ತದೆ. ಸಂಗ್ರಹಗೊಳಿಸಿದ ನೀರನ್ನು ಪಂಪ್‌ಗಳ ಮುಖಾಂತರ ಬೋದಕ ಆಸ್ಪತ್ರೆಯ ಮೇಲಿರುವ ಸಿಂಟೆಕ್ಸ್‌ಗಳಿಗೆ ತುಂಬಲಾಗುತ್ತದೆ. ಆದರೆ ನೀರಿನ ತೊಟ್ಟಿಯಿಂದ ಸರಬರಾಜು ಮಾಡುವ 7.5 ಹೆಚ್‌ಪಿ ಪಂಪ್ ಹಾಗೂ 2 ಇಂಚ್ ವ್ಯಾಸವುಳ್ಳ ಪೈಪ್‌ಲೈನ್ ತುಂಬಾ ಕಿರಿದಾಗಿದಾಗಿರುವುದರಿಂದ, ಸಿಂಟೆಕ್ಸ್‌ಗಳಿಗೆ ನೀರು ಸಂಗ್ರಹವಾಗುತ್ತಿದ್ದಂತೆಯೇ ನೀರು ಭರಿದಾಗುತ್ತದೆ. ಇದರಿಂದಾಗಿ ಆಸ್ಪತ್ರೆಯಲ್ಲಿನ ವಾರ್ಡ್‌ಗಳು ಮತು ವಿಭಾಗಗಳಿಗೆ ನೀರಿನ ಸರಬರಾಜಿನಲ್ಲಿ ವಿಪರೀತ ತೊಂದರೆ ಉಂಟಾಗಿರುತ್ತದೆ. ಈ ಹಿನ್ನಲೆಯಲ್ಲಿ ನೀರಿನ ಸಂಗ್ರಹದ ತೊಟ್ಟಿಯಿಂದ ಬೋಧಕ ಆಸ್ಪತ್ರೆಯ ಕಟ್ಟಡದ ಮೇಲಿರುವ ಸಿಂಟೆಕ್ಸ್‌ಗಳಿಗೆ ಸರಾಗವಾಗಿ ನೀರನ್ನು ಸರಬರಾಜು ಮಾಡಲು 4 ಇಂಚ್ ವ್ಯಾಸವುಳ್ಳ ಪೈಪ್‌ಲೈನನ್ನು ಹಾಗೂ 10 ಹೆಚ್‌ಪಿ ಟೆಕ್ಸ್‌ಮೋ ಪಂಪ್ ಮೋಟಾರ್‌ಗಳನ್ನು ಅಳವಡಿಸಿದಲ್ಲಿ ನೀರಿನ ತೊಂದರೆಯನ್ನು ನಿವಾರಿಸಬಹುದಾಗಿರುತ್ತದೆ.

ಈ ಸಂಬಂಧವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್, ರಾಯಚೂರು ಇವರಿಗೆ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ನೀರು ಸಂಗ್ರಹವಾಗುವ ನೀರಿನ ತೊಟ್ಟಿಯಿಂದ ಆಸ್ಪತ್ರೆಯ ಮೇಲಿನ ಸಿಂಟೆಕ್ಸ್‌ಗಳಿಗೆ ಪೈಪ್‌ಲೈನ್‌ನ್ನು ಕಲ್ಪಿಸಲು ಅವಶ್ಯವಿರುವ ಅಂದಾಜು ಸಲ್ಲಿಸುವಂತೆ ಕೋರಲಾಗಿತ್ತು. ಸದರಿಯವರು ದಿನಾಂಕ 05.04.2016ರಂದು ರೂ. 5,25,000/– ಗಳ ಅಂದಾಜು ಪಟ್ಟಿಯನ್ನು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಮೆ॥ ಕ್ಯಾಷುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ ವಇ / 156 / ಹೆಚ್‌ಎಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಕಾರಣ ಆಸ್ಪತ್ರೆಗೆ ಬರುವ ರೋಗಿಗಳು, ಸಾರ್ವಜನಿಕರು ಹಾಗೂ ಸಿಬ್ಬಂದಿಗಳ ಹಿತದೃಷ್ಟಿಯಿಂದ 600 ಮೀಟರ್ ಅಂತರದಲ್ಲಿ ನೀರಿನ ಸಂಗ್ರಹದ ತೊಟ್ಟಿಯಿಂದ ಬೋಧಕ ಆಸ್ಪತ್ರೆಯ ಕಟ್ಟಡದ ಮೇಲಿರುವ ಸಿಟೆಂಕ್ಸ್‌ಗಳಿಗೆ ನೀರನ್ನು ಸರಾಗವಾಗಿ ಸರಬರಾಜು ಮಾಡಲು 4 ಇಂಚ್ ವ್ಯಾಸವುಳ್ಳ ಪೈಪ್‌ಲೈನನ್ನು ಹಾಗೂ 10 ಹೆಚ್‌ಪಿ ಟೆಕ್ಸ್‌ಮೋ ಪಂಪ್ ಮೋಟಾರ್ ನ್ನು ಅವಶ್ಯ ಕಾಮಗಾರಿಯೊಂದಿಗೆ ಮೆ॥ ಕ್ಯಾಷುಟೆಕ್ ಇವರಿಂದ ರೂ. 5,25,000/– ಗಳ ವೆಚ್ಚದಲ್ಲಿ ಕೈಗೊಳ್ಳಲು ಮತ್ತು ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ಉಳಿತಾಯವಾಗಿರುವ ರೂ. 5,41,50,647/– ಗಳ ಅನುದಾನದಿಂದ ಈ ವೆಚ್ಚವನ್ನು ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಿಮ್ಸ್ ಬೋಧಕ ಆಸ್ಪತ್ರೆಯ ನೀರಿನ ಸಂಗ್ರಹದ ತೊಟ್ಟಿಯಿಂದ ಬೋಧಕ ಆಸ್ಪತ್ರೆಯ ಕಟ್ಟಡದ ಮೇಲಿರುವ ಸಿಟೆಂಕ್ಸ್‌ಗಳಿಗೆ ನೀರನ್ನು ಸರಾಗವಾಗಿ ಸರಬರಾಜು ಮಾಡಲು 4 ಇಂಚ್ ವ್ಯಾಸವುಳ್ಳ ಪೈಪ್‌ಲೈನನ್ನು ಹಾಗೂ 10 ಹೆಚ್‌ಪಿ ಟೆಕ್ಸ್‌ಮೋ ಪಂಪ್ ಮೋಟಾರ್ ನ್ನು ಅವಶ್ಯ ಕಾಮಗಾರಿಯೊಂದಿಗೆ ಮೆ॥ ಕ್ಯಾಷುಟೆಕ್ ಇವರಿಂದ ರೂ. 5,25,000/– ಗಳ ವೆಚ್ಚದಲ್ಲಿ ಕೈಗೊಳ್ಳಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ಉಳಿತಾಯವಾಗಿರುವ ರೂ. 5,41,50,647/– ಗಳ ಅನುದಾನದಿಂದ ಪಾವತಿಸಲು ಅನುಮತಿ ನೀಡಲಾಯಿತು.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ವಿಷಯ ಸೂಚಿ ಸಂಖ್ಯೆ– 09 | ವೈದ್ಯಕೀಯ ಶಿಕ್ಷಣ ಘಟಕದ ಕೊಠಡಿಯನ್ನು ಹೊಸದಾಗಿ ಪ್ರಾರಂಭಿಸಲು ಅವಶ್ಯವಿರುವ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ |
|---|---|

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಬೋಧನಾ ಕಾರ್ಯಕ್ಕಾಗಿ ಹಾಗೂ ಇನ್ನಿತರ ವೈದ್ಯಕೀಯ ಚಟುವಟಿಕೆಗಳಿಗಾಗಿ (ಇ –ಕ್ಲಾಸ್, ಎಥಿಕಲ್, ಸಿ.ಎಂ.ಇ ಕಾರ್ಯಕ್ರಮಗಳು) ತಪ್ಪದೇ ವೈದ್ಯಕೀಯ ಶಿಕ್ಷಣ ಘಟಕವನ್ನು ನಿರ್ವಹಿಸಬೇಕಾಗಿರುತ್ತದೆ. ಸದ್ಯ ಈ ಸಂಸ್ಥೆಯಲ್ಲಿ ವೈದ್ಯಕೀಯ ಶಿಕ್ಷಣ ಘಟಕವು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮದಂತೆ ಅವಶ್ಯ ವಿಸ್ತೀರ್ಣದಲ್ಲಿರುವುದಿಲ್ಲ.

ಕಾರಣ ಈ ಸಂಸ್ಥೆಯಲ್ಲಿ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮದಂತೆ ಅವಶ್ಯ ವಿಸ್ತೀರ್ಣದಲ್ಲಿ ವೈದ್ಯಕೀಯ ಘಟಕವನ್ನು ಫಾಲ್ಸ್ ಸೀಲಿಂಗ್, ಪಾರ್ಟಿಷನ್ ಮತ್ತು ಸಿವಿಲ್ ಕಾಮಗಾರಿಯೊಂದಿಗೆ ಸುಸಜ್ಜಿತವಾಗಿ ನಿರ್ಮಾಣ ಮಾಡಲು ಮೆ॥ ಕ್ಯಾಷುಟೆಕ್ ಇವರಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್ ಇವರ ಈ ಕೆಳಗಿನಂತೆ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ.

1) **Detailed estimation for renovation of Alluminium Partition works at Medical Education Unit Estimated cost Rs. 4,75,000/-**

2) **Detailed estimation for renovation and Fal Ceiling work of Medical Education Unit estimated cost Rs. 4,90,000/-**

3) **Detailed estimation for renovation of shifting & Aluminium partition chambers at Medical Education Unit estimated cost Rs. 2,75,000/-.**

ಮೆ॥ ಕ್ಯಾಷುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ. ವಇ / 156 / ಹೆಚ್ಎಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಕಾರಣ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಯಂತೆ, ವೈದ್ಯಕೀಯ ಶಿಕ್ಷಣ ಘಟಕವನ್ನು ಸುಸಜ್ಜಿತವಾಗಿ ನಿರ್ಮಾಣ ಮಾಡಲು ಮೆ॥ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್ ಇವರ ಸಲ್ಲಿಸಿರುವ ಒಟ್ಟು 03 ಅಂದಾಜು ಪಟ್ಟಿಗಳ ಮೊತ್ತ ರೂ. 12,40,000/– ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಹಾಗೂ ಈ ವೆಚ್ಚವನ್ನು 2014–15 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4210–03–105–1–02–386 ಯೋಜನೆ ಅಡಿಯಲ್ಲಿ ಅಕೌಸ್ಟಿಕ್ ಕಾಮಗಾರಿಯ ಸಂಬಂಧ ರೂ. 2,75,00,000/– ಗಳನ್ನು ಬಿಡುಗಡೆ ಮಾಡಲಾಗಿತ್ತು. ಅದರಲ್ಲಿ ಗುತ್ತಿಗೆದಾರರಿಗೆ ರೂ. 2,59,14,655/– ಗಳನ್ನು ಪಾವತಿಸಲಾಗಿದ್ದು, ರೂ. 15,85,345/– ಗಳ ಅನುದಾನವು ಉಳಿತಾಯವಾಗಿರುತ್ತದೆ. ಉಳಿತಾಯವಾಗಿರುವ ಇದೇ ಲೆಕ್ಕ ಶಿರ್ಷಿಕೆ ಅಡಿಯಲ್ಲಿ ಈ ವೆಚ್ಚವನ್ನು ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸಭೆಯ ತೀರ್ಮಾನ :-

ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಯಂತೆ, ವೈದ್ಯಕೀಯ ಶಿಕ್ಷಣ ಘಟಕವನ್ನು ಸುಸಜ್ಜಿತವಾಗಿ ನಿರ್ಮಾಣ ಮಾಡಲು ಮೆ॥ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್ ಇವರ ಸಲ್ಲಿಸಿರುವ ಒಟ್ಟು 03 ಅಂದಾಜು ಪಟ್ಟಿಗಳ ಮೊತ್ತ ರೂ. 12,40,000/- ಗಳಿಗೆ ಆರ್ಥಿಕ ಸಮಿತಿ ಸಭೆಯು ಪರಿಶೀಲಿಸಿ ಅನುಮೋದನೆಯನ್ನು ನೀಡಲಾಯಿತು ಹಾಗೂ ಈ ವೆಚ್ಚವನ್ನು 2014-15 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4210-03-105-1-02-386 ಯೋಜನೆ ಅಡಿಯಲ್ಲಿ ಅಕೌಸ್ಟಿಕ್ ಕಾಮಗಾರಿಯ ಸಂಬಂಧ ಬಿಡುಗಡೆ ಮಾಡಿ ಉಳಿತಾಯವಾಗಿರುವ ರೂ. 15,85,345/- ಗಳ ಅನುದಾನದಿಂದ ಪಾವತಿಸಲು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ- 10 | ರಿಮ್ಸ್ ಬೋಧಕ ಆಸ್ಪತ್ರೆಯ 6ನೇ ಮಹಡಿಯಲ್ಲಿ ಅಲ್ಯೂಮಿನಿಯಂ ಪಾರ್ಟಿಷನ್ ಹಾಗೂ ಕಟ್ಟಡದ ನಾಲ್ಕು ಮೂಲೆಗಳಲ್ಲಿ ಪಾಲಿ ಕಾರ್ಬೋನೇಟ್ ಶೀಟನ್ನು ಅಳವಡಿಸುವ ಬಗ್ಗೆ |

ರಿಮ್ಸ್ ಬೋಧಕ ಆಸ್ಪತ್ರೆಯ ಗಾಜಿನ ಮಧ್ಯೆ ಕಾರ್ಬನ್ ಶೀಟ್ ಮತ್ತು ಅಪರೇಶನ್ ಥೀಯೇಟರ್‌ನಲ್ಲಿ ಅಲ್ಯೂಮಿನಿಯಂ ಪಾರ್ಟಿಶನ್ ಹಾಗೂ ಕಟ್ಟಡ ನಾಲ್ಕು ಮೂಲೆಗಳಲ್ಲಿ ಪಾಲಿ ಕಾರ್ಬೋನೇಟ್ ಶೀಟ್‌ನ್ನು ಅಳವಡಿಸುವ ಸಂಬಂಧ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಅರವಳಿಕೆ ವಿಭಾಗ ಇವರ ಕೋರಿಕೆ ಮೇರೆಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್ ಇವರಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ದಿನಾಂಕ 04.03.2016 ರಂದು ತಿಳಿಸಲಾಗಿತ್ತು. ಈ ಹಿನ್ನಲೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್ ಇವರು ಈ ಕೆಳಗಿನಂತೆ ಅಂದಾಜು ಪಟ್ಟಿಯನ್ನು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

1) **Providing and Fixing of Alluminium Partition at 6th Floor Rs. 3,31,000/-**
2) **Renovation of Front elvation glass corridors with polly corbonate sheet at corridors Rs. 1,95,000/-**

ಮೆ॥ ಕ್ಯಾಷುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ. ವಇ / 156 / ಹೆಚ್‌ಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಕಾರಣ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್ ಇವರು ಸಲ್ಲಿಸಿರುವ ಅಲ್ಯೂಮಿನಿಯಂನ ಪಾರ್ಟಿಷನ್ ನ ಅಂದಾಜು ಪಟ್ಟಿ ರೂ. 3,31,000/- ಗಳು ಹಾಗೂ ಕಟ್ಟಡದ ನಾಲ್ಕು ಮೂಲೆಗಳಲ್ಲಿ ಪಾಲಿ ಕಾರ್ಬೋನೇಟ್ ಶೀಟನ್ನು ಅಳವಡಿಸುವ ಸಂಬಂಧ ಸಲ್ಲಿಸಲಾಗಿರುವ ರೂ. 1,95,000/- ಗಳ ಅಂದಾಜು ಪಟ್ಟಿ ಸೇರಿ ಒಟ್ಟು ರೂ. 5,26,000/- ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ. 62334775412 ದಲ್ಲಿ ಸಂಗ್ರಹವಾಗಿರುವ ರೂ. 5,41,50,647/- ಗಳ ಅನುದಾನದಿಂದ ಈ ವೆಚ್ಚವನ್ನು ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ. ಕವಿತಾ ಪಾಟೇಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಅಲ್ಯೂಮಿನಿಯಂನ ಪಾರ್ಟಿಷನ್ ಹಾಗೂ ಕಟ್ಟಡದ ನಾಲ್ಕು ಮೂಲೆಗಳಲ್ಲಿ ಪಾಲಿ ಕಾರ್ಬೋನೇಟ್ ಶೀಟನ್ನು ಅಳವಡಿಸುವ ಸಂಬಂಧ ಸಲ್ಲಿಸಲಾಗಿರುವ (ಅಲ್ಯೂಮಿನಿಯಂ ಪಾರ್ಟಿಷನ್ ರೂ. 3,31,000/- + ಪಾಲಿ ಕಾರ್ಬೋನೇಟ್ ಶೀಟನ್ನು ಅಳವಡಿಸಲು ರೂ. 1,95,000/-) ಒಟ್ಟು ರೂ. 5,26,000/- ಗಳ ಅಂದಾಜು ಪಟ್ಟಿಗೆ ಆರ್ಥಿಕ ಸಮಿತಿಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆಯನ್ನು ನೀಡಲಾಯಿತು. ಹಾಗೂ ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿಯ ಖಾತೆ ಸಂಖ್ಯೆ. 62334775412 ದಲ್ಲಿ ಸಂಗ್ರಹವಾಗಿರುವ ರೂ. 5,41,50,647/- ಗಳ ಅನುದಾನದಿಂದ ಪಾವತಿಸಲು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ.- 11 | ರಿಮ್ಸ್ ಸಂಸ್ಥೆಯ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ವಸತಿ ನಿಲಯಗಳಿಗೆ ಮೆಶ್ (ಜಾಲಿ) ಅಳವಡಿಸುವ ಬಗ್ಗೆ. |

ವಾರ್ಡನ್, ವಿದ್ಯಾರ್ಥಿಗಳ ಹಾಗು ವಿದ್ಯಾರ್ಥಿನಿಯರ ವಸತಿ ನಿಲಯಗಳು ಇವರು ರಿಮ್ಸ್ ಆವರಣದಲ್ಲಿರುವ ವಿದ್ಯಾರ್ಥಿಗಳ ವಸತಿ ನಿಲಯಗಳ ಸುತ್ತಮುತ್ತ ವಿಪರೀತ ಸೊಳ್ಳೆಗಳ ಹಾವಳಿ ಜಾಸ್ತಿಯಾಗಿದ್ದು, ಕಿಟಕಿಗಳಿಗೆ ಮೆಶ್ (ಜಾಲಿ) ವ್ಯವಸ್ಥೆ ಇಲ್ಲದೇ ಇರುವುದರಿಂದ, ಸೊಳ್ಳೆಗಳು ನೇರವಾಗಿ ಹಾಸ್ಟೆಲ್‌ಗಳನ್ನು ಪ್ರವೇಶಿಸುತ್ತವೆ. ಸೊಳ್ಳೆಗಳ ಹಾವಳಿ ಜಾಸ್ತಿಯಾಗಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವುದಲ್ಲದೇ ನಾನಾ ಖಾಯಿಲೆಗಳು ಉದ್ಭವಕ್ಕೆ ಕಾರಣವಾಗಿರುತ್ತವೆಂದು ತಿಳಿಸಿ, ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ವಸತಿ ನಿಲಯಗಳ ಎಲ್ಲಾ ಕಿಟಕಿಗಳಿಗೆ ಮತ್ತು ಬಾತ್‌ರೂಮ್ ವೆಂಟಿಲೇಟರ್ಸ್‌ಗಳಿಗೆ ಅದಷ್ಟು ಬೇಗ ಮೆಶ್ (ಜಾಲಿ) ಅಳವಡಿಸಲು ಕೋರಿದ ಹಿನ್ನಲೆಯಲ್ಲಿ ಈ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್ / ಸಾಮಾನ್ಯ / 2015-16 / 313 ದಿ. 03.03.2016 ರಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಪುಟೆಕ್ ಇವರಿಗೆ ಎರಡು ವಸತಿ ನಿಲಯಗಳ ಅಂದಾಜು ಪಟ್ಟಿಗಳನ್ನು ಸಲ್ಲಿಸುವಂತೆ ಕೋರಲಾಗಿತ್ತು.

ಕಾರ್ಯನಿರ್ವಾಹಕ ನಿರ್ದೇಶಕರು, ಕ್ಯಾಪುಟೆಕ್, ರಾಯಚೂರು ಇವರು ದಿನಾಂಕ 08.03.2016 ರ ಪತ್ರಗಳಲ್ಲಿ ವಿದ್ಯಾರ್ಥಿಗಳ ವಸತಿ ಸಮುಚ್ಚಯಕ್ಕೆ ಮೆಶ್ (ಜಾಲಿ) ನ್ನು ಕಿಟಕಿಗಳಿಗೆ, ಹಾಗೂ ಬಾತ್‌ರೂಮ್ ವೆಂಟಿಲೇಟರ್‌ಗಳಿಗೆ ಅಳವಡಿಸುವ ಸಂಬಂಧ ರೂ. 9,00,000/- ಗಳ ಅಂದಾಜು ಪಟ್ಟಿಯನ್ನು ಹಾಗೂ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಮೆಶ್‌ನ್ನು ಅಳವಡಿಸಲು ರೂ. 8,92,000/- ಗಳ ಅಂದಾಜು ಪಟ್ಟಿಗಳನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ವಿದ್ಯಾರ್ಥಿಗಳ ಪ್ರವೇಶದ ಸಂಧರ್ಭದಲ್ಲಿ ಪ್ರತಿ ವಿದ್ಯಾರ್ಥಿಯಿಂದ ಒಂದು ಬಾರಿ ರೂ. 16,500/- ಗಳ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ. ಹಾಗೂ ರೂ. 4,500/- ಗಳನ್ನು ಪ್ರತಿ 06 ತಿಂಗಳಿಗೆ ಒಂದು ಬಾರಿ ಬಾಡಿಗೆ, ವಿದ್ಯುತ್ ಮತ್ತು ನೀರಿನ ಕರವಾಗಿ ಸಂಗ್ರಹಿಸಲಾಗುತ್ತದೆ.

| | | |
|---|---|---|
| ಭದ್ರತಾ ಠೇವಣಿ | : | ರೂ. 10,000/- |
| Establishment ಶುಲ್ಕ | : | ರೂ. 2,000/- |
| ಹಾಸ್ಟೇಲ್ ಬಾಡಿಗೆ | : | ರೂ. 3,000/- |
| ವಿದ್ಯುತ್ ಹಾಗೂ ನೀರಿನ ತೆರಿಗೆ | : | ರೂ. 1,200/- |
| ನಿರ್ವಹಣೆಗೆ | : | ರೂ. 300/- |
| ಒಟ್ಟು | : | ರೂ. 16,500/- |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಶುಲ್ಕವನ್ನು ಈ ಸಂಸ್ಥೆಯ ಖಾತೆ ಸಂಖ್ಯೆ 62036768877 ನಲ್ಲಿ ಜಮಾ ಮಾಡಲಾಗುತ್ತಿದ್ದು, ರೂ. 50,00,000/- ಗಳ ಅನುದಾನವು ಲಭ್ಯವಿರುತ್ತದೆ.

ಮೆ॥ ಕ್ಯಾಷುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ ವಇ / 156 / ಹೆಚ್‌ಎಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಕಾರಣ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್ ಇವರು ಸಲ್ಲಿಸಿರುವ ಅಂದಾಜು ಪಟ್ಟಿಗಳನ್ನು ಆರ್ಥಿಕ ಸಮಿತಿ ಸಭೆಯ ಗಮನಕ್ಕೆ ತಂದು ವಿದ್ಯಾರ್ಥಿಗಳ ವಸತಿ ನಿಲಯದ ಕಿಟಕಿಗಳಿಗೆ, ಹಾಗೂ ಬಾತ್‌ರೂಮ್ ವೆಂಟಿಲೇಟರ್‌ಗಳಿಗೆ ರೂ. 9,00,000/- ಗಳ ವೆಚ್ಚದಲ್ಲಿ ಮೆಶ್‌ನ್ನು ಅಳವಡಿಸಲು ಹಾಗೂ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ರೂ. 8,92,000/- ಗಳು ಸೇರಿ ಒಟ್ಟು ರೂ. 17,92,000/- ಗಳ ವೆಚ್ಚದಲ್ಲಿ ಮೆಶ್ (ಜಾಲಿ) ನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್ ಇವರಿಂದ ಅಳವಡಿಸಲು ಹಾಗೂ ಸದರಿ ವೆಚ್ಚವನ್ನು ಮೇಲಿನಂತೆ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಬಾಡಿಗೆ ಮೊತ್ತದಿಂದ ಭರಿಸಲು ಆರ್ಥಿಕ ಸಮಿತಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಆವರಣದಲ್ಲಿರುವ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ವಸತಿ ನಿಲಯಗಳ ಕಿಟಕಿ, ಹಾಗೂ ಬಾತ್‌ರೂಮ್ ವೆಂಟಿಲೇಟರ್‌ಗಳಿಗೆ ಮೆಶ್‌ನ್ನು (ಜಾಲಿ) ಅಳವಡಿಸಲು ಒಟ್ಟು ರೂ. 17,92,000/- (ವಿದ್ಯಾರ್ಥಿಗಳ ವಸತಿ ನಿಲಯ ರೂ. 9,00,000/- + ವಿದ್ಯಾರ್ಥಿನಿಯರ ವಸತಿ ನಿಲಯ ರೂ. 8,92,000/-) ಗಳ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಮೆ॥ ಕ್ಯಾಷುಟೆಕ್ ಇವರಿಂದ ಕಾಮಗಾರಿಯನ್ನು ಕೈಗೊಳ್ಳಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ಖಾತೆ ಸಂಖ್ಯೆ 62036768877 ರಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಪಾವತಿಸಲು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ- 12 | ರಿಮ್ಸ ಸಂಸ್ಥೆಗೆ ಅಗ್ನಿಶಾಮಕ ಇಲಾಖೆಯಿಂದ ತರಬೇತಿ ಪಡೆದ 06 ಸಿಬ್ಬಂದಿಗಳನ್ನು ಸ್ಟೈಫೆಂಡ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. |

ರಾಯಚೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಎಂಟು ವಿಭಾಗಗಳು, 364 ವಿದ್ಯಾರ್ಥಿಗಳು, 364 ವಿದ್ಯಾರ್ಥಿನಿಯರ ವಸತಿ ನಿಲಯದ ಕೊಠಡಿಗಳು, 48 ಬೋಧಕ ಹಾಗೂ 64 ಬೋಧಕೇತರ ಸಿಬ್ಬಂದಿ ವಸತಿ ಗೃಹಗಳು ಮತ್ತು ರಿಮ್ಸ್ ನೂತನ 520 ಹಾಸಿಗೆಗಳ ಬೋಧಕ ಆಸ್ಪತ್ರೆಯಲ್ಲಿ 13 ವಿವಿಧ ವಿಭಾಗಗಳಿದ್ದು, ಈ ಎಲ್ಲಾ ಕಟ್ಟಡಗಳು ಬಹುಮಹಡಿ ಕಟ್ಟಡಗಳಾಗಿರುತ್ತವೆ. ಈ ಹಿನ್ನಲೆಯಲ್ಲಿ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದು ಅಗ್ನಿಶಾಮಕ ನಿಯಂತ್ರಣ ಸಾಧನಗಳನ್ನು ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ಕಟ್ಟಡದ ಎಲ್ಲಾ ಮಹಡಿಗಳಲ್ಲಿ ಅಳವಡಿಸಲಾಗಿರುತ್ತದೆ. ಆದರೆ ಅಗ್ನಿ ಅವಗಢಗಳು ಸಂಭವಿಸಿದ ವೇಳೆಯಲ್ಲಿ ಅಗ್ನಿಶಾಮಕ ನಿಯಂತ್ರಣ ಸಾಧನಗಳು ಲಭ್ಯವಿದ್ದರೂ ಸಹ ಬೆಂಕಿ ನಂದಿಸಲು ಬೇಕಾದಂತಹ

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸಿಬ್ಬಂದಿಗಳಿರುವುದಿಲ್ಲ. ಮತ್ತು ಇಂತಹ ಸಮಯದಲ್ಲಿ ಅಗ್ನಿ ಅವಗಡಗಳು ಸಂಭವಿಸಿದ ತುರ್ತು ವೇಳೆಯಲ್ಲಿ ಅಗ್ನಿಶಾಮಕ ಇಲಾಖೆಗೆ ದೂರವಾಣಿ ಕರೆ ಮಾಡಿ ತಿಳಿಸಿದರೂ ಸಹ ಸದರಿಯವರು ಸ್ಥಳಕ್ಕೆ ಭೇಟಿ ನೀಡಿ, ಬೆಂಕಿ ನಂದಿಸುವ ವೇಳೆಗೆ ಹೆಚ್ಚಿನ ಅನಾಹುತಗಳೂ ಸಂಭವಿಸುವ ಸಾಧ್ಯತೆಯಿರುತ್ತದೆ. ಇಂತಹ ಅನಾಹುತಗಳನ್ನು ತಡೆಗಟ್ಟಲು ರೋಗಿಗಳ, ಸಿಬ್ಬಂದಿಗಳ ಹಾಗೂ ಸಾರ್ವಜನಿಕರ ಸುರಕ್ಷತೆ ಹಾಗೂ ಭದ್ರತೆಯ ಹಿತದೃಷ್ಟಿಯಿಂದ ಅಗ್ನಿಶಾಮಕ ಇಲಾಖೆಯಿಂದ ತರಬೇತಿ ಪಡೆದಂತಹ 06 ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವುದು ಅತಿ ಅವಶ್ಯಕವಾಗಿರುತ್ತದೆ.

ಕಾರಣ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಯಾವುದೇ ಅಗ್ನಿ ಅವಗಡಗಳು ಸಂಭವಿಸದಂತೆ ಮುನ್ನೆಚರಿಕಾ ಕ್ರಮವಾಗಿ ಅಗ್ನಿಶಾಮಕ ಇಲಾಖೆಯಿಂದ ತರಬೇತಿ ಪಡೆದಂತಹ 06 ಸಿಬ್ಬಂದಿಗಳನ್ನು ರೂ. 12,000/- ಗಳ (ಪ್ರತಿ ಮಾಹೆ) ಸ್ಟೈಪೆಂಡರಿ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಅಗ್ನಿಶಾಮಕ ಇಲಾಖೆಯು ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಿಂದ / ರಿಮ್ಸ್ ಬೋಧಕ ಆಸ್ಪತ್ರೆಯಿಂದ 2 ಕೀಲೋ ಮೀಟರ್‌ಗಳ ಅಂತರದಲ್ಲಿರುವುದರಿಂದ ಅಗ್ನಿಶಾಮಕ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳದೇಯಿರಲು ನಿರ್ದೇಶನ ನೀಡಲಾಯಿತು. ಅವಶ್ಯವಿದ್ದಲ್ಲಿ ಅಗ್ನಿಶಾಮಕ ಇಲಾಖೆಗೆ ಆವರಣದಲ್ಲಿ ಸ್ಥಳಾವಕಾಶವನ್ನು ನೀಡಿ ಅಗ್ನಿಶಾಮಕ ವಾಹನಗಳ ನಿಲುಗಡೆಗೆ ಅವಕಾಶ ಮಾಡಿಕೊಡುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಆರ್ಥಿಕ ಸಮಿತಿಯು ಸೂಚಿಸಿತು.

| | |
|---|---|
| ವಿಷಯ ಸೂಚಿ ಸಂಖ್ಯೆ– 13 | ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ನಿರ್ವಹಣಾ ವಿಭಾಗವನ್ನು ತೆರೆಯಲು ಅವಶ್ಯವಿರುವ ವಿವಿಧ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ದಿನಾಂಕ 16.08.2007 ರಿಂದ ಪ್ರಾರಂಭಗೊಂಡಿದ್ದು, ಪ್ರಸ್ತುತ ಈ ಸಂಸ್ಥೆಯಲ್ಲಿ ಸುಮಾರು 600 ವೈದ್ಯ ವಿದ್ಯಾರ್ಥಿಗಳು, 200 ಅರೆ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ರಿಮ್ಸ್ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಪ್ರತ್ಯೇಕವಾಗಿ ವಸತಿ ನಿಲಯಗಳ ಕಟ್ಟಡಗಳನ್ನು ನಿರ್ಮಿಸಲಾಗಿದೆ.

ಆವರಣದಲ್ಲಿರುವ ಎಲ್ಲಾ ಕಟ್ಟಡಗಳು ಬಹುಮಹಡಿ ಕಟ್ಟಡಗಳಾಗಿರುವುದರಿಂದ ಪ್ರತಿ ನಿತ್ಯ ಸ್ಕಾವೇಜಿಂಗ್, ಕಾರ್ಪೆಂಟರಿ, ಪ್ಲಂಬಿಂಗ್ ಹಾಗೂ ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯೆಗಳು ಮೇಲಿಂದ ಮೇಲೆ ಉದ್ಭವಿಸುತ್ತಲೇ ಇರುತ್ತವೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಲಭ್ಯವಿರುವ ಇಬ್ಬರು ಪ್ಲಂಬರ್ ಹಾಗೂ ಇಬ್ಬರು ವಿದ್ಯುತ್‌ಕರ್ಮಿಗಳಿಂದ ಇಂತಹ ಸಮಸ್ಯೆಗಳನ್ನು ಅದಷ್ಟು ಮಟ್ಟಿಗೆ ನಿವಾರಿಸಲಾಗುತ್ತಿದೆ. ಅದರೂ ಸಮಸ್ಯೆಗಳು ಮೇಲಿಂದ ಮೇಲೆ ಉದ್ಭವಿಸುತ್ತಲೇ ಇರುವುದರಿಂದ ಸ್ಕಾವೇಜಿಂಗ್, ಕಾರ್ಪೆಂಟರಿ, ಪ್ಲಂಬರ್ ಮತ್ತು ವಿದ್ಯುತ್ ಕರ್ಮಿಗಳನ್ನು ನೇಮಕಾತಿ ಮಾಡಿಕೊಳ್ಳುವುದು ಅತಿ ಅವಶ್ಯಕವಾಗಿರುತ್ತದೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ವಿ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಥಿ, ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ಓಪೆಕ್ ಆಸ್ಪತ್ರೆಗೆ ಅತ್ಯಾಧುನಿಕ ಉಪಕರಣ ಹಾಗೂ ಪೀಠೋಪಕರಣಗಳನ್ನು ಖರೀದಿಸಲಾಗಿದ್ದು, ಈ ಎಲ್ಲಾ ಉಪಕರಣ ಹಾಗೂ ಪೀಠೋಪಕರಣಗಳ ನಿಘಾವಹಿಸುವುದು, ಉಪಕರಣಗಳ ದುರಸ್ಥಿಯ ಸಮಯದಲ್ಲಿ ಅವುಗಳ ಪ್ರಮಾಣೀಕರಿಸುವುದು, ಉಪಕರಣಗಳ ವಾರೆಂಟಿ ಅವಧಿಯು ಮುಕ್ತಾಯದ ನಂತರ ದುರಸ್ಥಿಗಳೇನಾದರೂ ಬಂದಲ್ಲಿ ದುರಸ್ಥಿ ಕ್ರಮಗಳನ್ನು ಕೈಗೊಳ್ಳುವುದರ ಸಂಬಂಧ ಒರ್ವ ಬಯೋಮೆಡಿಕಲ್ ಇಂಜಿನಿಯರರನ್ನು ನೇಮಕಾತಿ ಮಾಡಿಕೊಳ್ಳುವುದು ಅತಿಅವಶ್ಯಕತೆಯಿರುತ್ತದೆ.

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದಿನನಿತ್ಯದ ಚಲನವಲನಗಳ ಬಗ್ಗೆ ಸಿಸಿಟಿವಿ ಮತ್ತು ಇಪಿಎಕ್ಸ್‌ಗಳನ್ನು ನಿಯಮಾನುಸಾರ ಅಳವಡಿಸಲಾಗಿರುತ್ತದೆ. ಅವುಗಳ ಕಾರ್ಯನಿರ್ವಹಣೆಯ ಬಗ್ಗೆ, ಮತ್ತು ಉಪಕರಣಗಳನ್ನು ಸರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿ ಕೊಳ್ಳಲು ಸಿಬ್ಬಂದಿಗಳ ನೇಮಕಾತಿ ಅತಿ ಅವಶ್ಯಕವಾಗಿರುತ್ತದೆ.

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 13 ಲಿಫ್ಟ್‌ಗಳನ್ನು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ 08 ಲಿಫ್ಟ್‌ಗಳನ್ನು ಹೀಗೆ ಒಟ್ಟ 21 ಲಿಫ್ಟ್ ಗಳನ್ನು ಅಳವಡಿಸಲಾಗಿರುತ್ತದೆ. ಆದರೆ ಲಿಫ್ಟ್‌ಗಳ ನಿರ್ವಹಣೆಯ ಸಂಬಂಧ ಲಿಫ್ಟ್ ಅಪರೇಟರ್ಸ್‌ಗಳನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ. ಇದರಿಂದಾಗಿ ಲಿಫ್ಟ್‌ಗಳ ದುರಸ್ಥಿಯ ಸಮಯದಲ್ಲಿ ಲಿಫ್ಟ್‌ಗಳನ್ನು ನೋಡಿಕೊಳ್ಳಲು ನುರಿತ ಸಿಬ್ಬಂದಿಗಳಿರುವುದಿಲ್ಲ. ಮತ್ತು ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ರಿಮ್ಸ್ ವೈದ್ಯಕೀಯ ಕಾಲೇಜಿನಲ್ಲಿ ಸರದಿಯ ಆಧಾರದ ಮೇಲೆ ಕಾರ್ಯನಿರ್ವಹಿಸಲು ಲಿಫ್ಟ್ ಅಪರೇಟರ್ಸ್‌ಗಳ ನೇಮಕಾತಿ ಅತಿ ಅವಶ್ಯಕವಾಗಿರುತ್ತದೆ.

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ಮುಂಭಾಗದಲ್ಲಿ ಉದ್ಯಾನವನಗಳನ್ನು ನಿರ್ಮಿಸಲಾಗಿದ್ದು, ಆವರಣದಲ್ಲಿನ ಉದ್ಯಾನವನಗಳನ್ನು ಅಚ್ಚಕಟ್ಟಾಗಿಡಲು ಮತ್ತು ಕಾಲಕಾಲಕ್ಕೆ ಉದ್ಯಾನವನದಲ್ಲಿ ಬೆಳೆಯುವ ಅನಾವಶ್ಯಕ ಹುಲ್ಲು, ಗಿಡ ಗಂಟೆಗಳನ್ನು ತೆಗೆದು ಹಾಕಿ ಉದ್ಯಾನವನಗಳನ್ನು ಚೊಕ್ಕಟವಾಗಿಡಲು ಗಾರ್ಡ್‌ನರ್‌ಗಳ ನೇಮಕಾತಿ ಅತಿ ಅವಶ್ಯಕವಾಗಿರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಆರ್ಥಿಕ ಸಮಿತಿ ಸಭೆಯ ಗಮನಕ್ಕೆ ತಂದು ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಕೆಲಸ ಕಾರ್ಯಗಳು ಯಾವುದೇ ಅಡೆತಡೆಯಿಲ್ಲದೇ ಜರುಗಿಸಲು ಈ ಕೆಳಕಂಡ ಹುದ್ದೆಗಳ ನೇಮಕಾತಿಯು ಅತಿ ಅವಶ್ಯಕವಾಗಿರುತ್ತದೆ.

| ಕ್ರ.ಸಂ | ಹುದ್ದೆಯ ವಿವರ | ಅವಶ್ಯವಿರುವ ಹುದ್ದೆಗಳ ಸಂಖ್ಯೆ | ಹುದ್ದೆಯ ಮೂಲ ವೇತನ | ಪ್ರತಿ ತಿಂಗಳ ಒಟ್ಟು ವೇತನ (ಮೂಲವೇತನ +ಡಿಎ+ಹೆಚ್‌ಆರ್‌ಎ+ಎಂಎ+ಡಬ್ಲೂಎ ಭತ್ಯೆಗಳು ಸೇರಿ ಪ್ರತಿ ಹುದ್ದೆಗೆ) | ಒಂದು ವರ್ಷಕ್ಕೆ ಸಲ್ಲುವ ವೇತನದ ವಿವರ |
|---|---|---|---|---|---|
| 1 | 2 | 3 | 4 | 5 | 6 |
| 1. | ಬಯೋಮೆಡಿಕಲ್ ಇಂಜಿನಿಯರ್ | 01 | 22800 | 32990 | 395880 |
| 2. | ಸಿಸಿಟಿವಿ ಮತ್ತು ಇಪಿಬಿಎಕ್ಸ್ ಗಳ ತಂತ್ರಜ್ಞರು | 04 | 22800 | 32990 x 4=131960 | 1583520 |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| | | | | | |
|---|---|---|---|---|---|
| 3. | ಲಿಫ್ಟ್ಸ್ ಅಪರೇಟರ್ಸ್ | 10 | 14550 | 21234 x 10=212340 | 2548080 |
| 4. | ವಿದ್ಯುತ್ ಕರ್ಮಿಗಳು | 04 | 11600 | 17030 x 4=68120 | 817440 |
| 5. | ಪ್ಲಂಬರ್ಸ್ | 06 | 11000 | 16175 x 6=97050 | 1164600 |
| 6. | ಗಾರ್ಡನರ್ | 10 | 9600 | 14180 x 10=141800 | 1701600 |
| 7. | ಕಾರ್ಪೆಂಟರ್ಸ್ | 02 | 10400 | 15320 x 2=30640 | 367680 |
| 8. | ಸ್ಕಾವೆಂಜರ್ಸ್ | 06 | 9600 | 14180 x 6=85080 | 1020960 |
| 9. | ಪಂಪ್ ಅಪರೇಟರ್ಸ್ | 03 | 10400 | 15320 x 3=45960 | 551520 |
| 10. | ಆಕ್ಸಿಜನ್ ಮಾನಿಪೋಲ್ಡ್ ತಂತ್ರಜ್ಞರು | 01 | 14550 | 21234 | 254808 |
| 11. | ಹವಾ ನಿಯಂತ್ರಕಗಳ (AC) ತಂತ್ರಜ್ಞರು | 01 | 14550 | 21234 | 254808 |
| | ಒಟ್ಟು | 48 | | | 10660896 |

ಕಾರಣ ವಿದ್ಯಾರ್ಥಿಗಳು, ಸಿಬ್ಬಂದಿಗಳು ಹಾಗೂ ರೋಗಿಗಳ ಹಿತದೃಷ್ಟಿಯಿಂದ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ನಿರ್ವಹಣಾ ವಿಭಾಗವನ್ನು ಪ್ರಾರಂಭಿಸಲು ಅವಶ್ಯವಿರುವ ಈ ಮೇಲ್ಕಂಡ ಎಲ್ಲಾ ಹುದ್ದೆಗಳನ್ನು ತಾತ್ಕಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ನಿರ್ವಹಣಾ ವಿಭಾಗವನ್ನು ಪ್ರಾರಂಭಿಸಲು ಅವಶ್ಯವಿರುವ ಎಲ್ಲಾ ಹುದ್ದೆಗಳನ್ನು ನಿಯಮಾನುಸಾರ ಹೊರಗುತ್ತಿಗೆಯ ಮುಖಾಂತರ ನೇಮಕಾತಿ ಮಾಡಿಕೊಳ್ಳುವಂತೆ ಆರ್ಥಿಕ ಸಮಿತಿ ಸಭೆಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ನಿರ್ದೇಶನ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ:- 14 | ರಿಮ್ಸ್ ಬೋಧಕ ಆಸ್ಪತ್ರೆಯ 3ನೇ, 4ನೇ ಮತ್ತು 5ನೇ ಮಹಡಿಗಳ ವಾರ್ಡ್‌ಗಳ ಸುರಕ್ಷತೆಯ ಹಿತದೃಷ್ಟಿಯಿಂದ ಗೇಟ್‌ಗಳನ್ನು ಅಳವಡಿಸಲು ಅನುಮತಿ ನೀಡುವ ಬಗ್ಗೆ. |

ಪ್ರಸ್ತುತ ರಿಮ್ಸ್ ಬೋಧಕ ಆಸ್ಪತ್ರೆಯ 3ನೇ, 4ನೇ ಮತ್ತು 5ನೇ ಮಹಡಿಗಳಲ್ಲಿ ರೋಗಿಗಳ ಜನಸಂದಣಿಯಿಂದ ವಾರ್ಡ್‌ಗಳ ಸುರಕ್ಷತೆಗಾಗಿ ಗೇಟ್‌ಗಳನ್ನು ಅಳವಡಿಸಬೇಕಾಗಿರುತ್ತದೆ. ಈ ಸಂಬಂಧವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಪುಟೆಕ್ ಇವರಿಗೆ ಆಸ್ಪತ್ರೆಯ 3ನೇ, 4ನೇ ಮತ್ತು 5ನೇ ಮಹಡಿಗಳ ವಾರ್ಡ್‌ಗಳ ಸುರಕ್ಷತೆಯ ಹಿತದೃಷ್ಟಿಯಿಂದ ಗೇಟ್‌ಗಳನ್ನು ಅಳವಡಿಸಲು ಅವಶ್ಯವಿರುವ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಸದರಿಯವರು ರಿಮ್ಸ್ ಬೋಧಕ ಆಸ್ಪತ್ರೆಯ 3ನೇ, 4ನೇ ಮತ್ತು 5ನೇ ಮಹಡಿಗಳ ವಾರ್ಡ್‌ಗಳಲ್ಲಿನ ರೋಗಿಗಳ ಸುರಕ್ಷತೆಯ ಹಿತದೃಷ್ಟಿಯಿಂದ ಗೇಟ್‌ಗಳನ್ನು ಅಳವಡಿಸಲು ಅವಶ್ಯವಿರುವ ರೂ. 8,65,000/- ಗಳ ಅಂದಾಜು ಪಟ್ಟಿಯನ್ನು ದಿನಾಂಕ 05.04.2016ರಂದು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಮೆ॥ ಕ್ಯಾಪುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ ವಇ / 156 / ಹೆಚ್ಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಕಾರಣ ರೋಗಿಗಳು ಹಾಗೂ ಸಿಬ್ಬಂದಿಗಳ ಹಿತದೃಷ್ಟಿಯಿಂದ, ರಿಮ್ಸ್ ಬೋಧಕ ಆಸ್ಪತ್ರೆಯ 3ನೇ, 4ನೇ ಮತ್ತು 5ನೇ ಮಹಡಿಗಳ ವಾರ್ಡ್‌ಗಳಲ್ಲಿ ರೋಗಿಗಳ ಹಿತದೃಷ್ಟಿಯಿಂದ ಗೇಟ್‌ಗಳನ್ನು ಅಳವಡಿಸಲು ರೂ. 8,65,000/- ಗಳ ವೆಚ್ಚದಲ್ಲಿ ಅಳವಡಿಸಲು ಮತ್ತು ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ಸಂಗ್ರಹವಾಗಿರುವ ರೂ. 5,41,50,647/- ಗಳ ಅನುದಾನದಿಂದ ಈ ವೆಚ್ಚವನ್ನು ಭರಿಸುವ ಬಗ್ಗೆ ಆರ್ಥಿಕ ಸಮಿತಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯ 3ನೇ, 4ನೇ ಮತ್ತು 5ನೇ ಮಹಡಿಗಳ ವಾರ್ಡ್‌ಗಳಲ್ಲಿ ರೋಗಿಗಳ ಹಿತದೃಷ್ಟಿಯಿಂದ ಗೇಟ್‌ಗಳನ್ನು ಮೆ॥ ಕ್ಯಾಪುಟೆಕ್ ಇವರಿಂದ ರೂ. 8,65,000/- ಗಳ ವೆಚ್ಚದಲ್ಲಿ ಅಳವಡಿಸಲು ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ಸಂಗ್ರಹವಾಗಿರುವ ರೂ. 5,41,50,647/- ಗಳ ಅನುದಾನದಿಂದ ಪಾವತಿಸುವಂತೆ ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ- 15 | ರಿಮ್ಸ್ ಬೋಧಕ ಆಸ್ಪತ್ರೆಯ ದಿನನಿತ್ಯದ ವೆಚ್ಚಗಳಿಗಾಗಿ ನೀಡುವ ಮುಂಗಡ ಹಣವನ್ನು ರೂ. 50,000/- ಗಳಿಂದ ರೂ. 1,00,000/- ಕ್ಕೆ ಹೆಚ್ಚಿಸುವ ಬಗ್ಗೆ. |

ರಿಮ್ಸ್ ಬೋಧಕ ಆಸ್ಪತ್ರೆಗೆ ಪ್ರತಿ ನಿತ್ಯ ಚಿಕಿತ್ಸೆಗಾಗಿ ಜಿಲ್ಲೆಯ ವಿವಿಧ ಮೂಲೆಗಳಿಂದ ರೋಗಿಗಳು ಆಸ್ಪತ್ರೆಗೆ ಬರುತ್ತಿದ್ದು, ಈ ರೋಗಿಗಳಿಗೆ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಔಷಧಿಗಳು ಲಭ್ಯವಿಲ್ಲದ ಸಂಧರ್ಭದಲ್ಲಿ ಅತಿ ಜರೂರಾಗಿ ಬೇಕಾಗುವ ಜೀವ ರಕ್ಷಕ ಔಷಧಿಗಳನ್ನು ಸ್ಥಳೀಯವಾಗಿ ಖರೀದಿಸಿ ಪೂರೈಸಬೇಕಾಗಿರುತ್ತದೆ. ಇಲ್ಲವಾದಲ್ಲಿ ರೋಗಿಯ ಜೀವಕ್ಕೆ ಹಾನಿ ಉಂಟಾಗುವ ಸಾಧ್ಯತೆಯಿರುತ್ತದೆಯೆಂದು. ಬೇಸಿಗೆಯಂತಹ ಸಮಯಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುತ್ತಿರುವುದರಿಂದ, ಮತ್ತು ನಿಗದಿತ ಸಮಯದಲ್ಲಿ ನಗರಸಭೆಯಿಂದ ನೀರು ಪೂರೈಕೆಯಾಗದಿದ್ದಲ್ಲಿ ನೀರನ್ನು ಟ್ಯಾಂಕರ್ ಮುಖಾಂತರ ಖರೀದಿಸಿ ಪೂರೈಸಬೇಕಾಗುತ್ತದೆ. ಮತ್ತು ಆಸ್ಪತ್ರೆಯ ಕಟ್ಟಡಕ್ಕೆ ಸಂಬಂಧಿಸಿದ ಸಣ್ಣಪುಟ್ಟ ರಿಪೇರಿ, ವಿದ್ಯುತ್ ಮತ್ತು ಪ್ಲಂಬಿಂಗ್‌ಗೆ ಸಂಬಂಧಿಸಿದ ಹಾಗೂ ಕಟ್ಟಡಗಳ ದುರಸ್ಥಿ ಕಾರ್ಯಗಳಿಗೋಸ್ಕರ ಪ್ರತಿ ತಿಂಗಳು ರೂ. 50,000/-ಗಳ ಮುಂಗಡವನ್ನು ರಿಮ್ಸ್ ಬೋಧಕ ಆಸ್ಪತ್ರೆಗೆ ಮಂಜೂರು ಮಾಡುತ್ತಿದ್ದು, ಈ ಮೊತ್ತವು ಈ ಮೇಲಿನ ಕಾರ್ಯಗಳಿಗಾಗಿ ಸಾಲುತ್ತಿಲ್ಲ. ಇದರಿಂದಾಗಿ ಆಸ್ಪತ್ರೆಯ ದೈನಂದಿನ ಕೆಲಸ ಕಾರ್ಯಗಳು ಕುಂಠಿತಗೊಳ್ಳುತ್ತಿವೆ. ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ ಇವರು ಪ್ರಸ್ತುತ ರಿಮ್ಸ್ ಬೋಧಕ ಆಸ್ಪತ್ರೆಗೆ ನೀಡುತ್ತಿರುವ ಸಂಕ್ಷಿಪ್ತ ಸಾದಿಲ್ವಾರು ಮುಂಗಡವನ್ನು ರೂ. 50,000/- ದಿಂದ ರೂ. 1,00,000/-ಕ್ಕೆ ಹೆಚ್ಚಿಸುವಂತೆ ಕೋರಿ ದಿನಾಂಕ 06.04.2016ರಂದು ಈ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವ ಹಿತದೃಷ್ಟಿಯಿಂದ, ರೋಗಿಗಳು ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಮುಂಗಡವನ್ನು ರೂ. 50,000/- ದಿಂದ ರೂ. 1,00,000/- ದವರೆಗೆ ಹೆಚ್ಚಿಸಲು ಆರ್ಥಿಕ ಸಮಿತಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯ ದಿನನಿತ್ಯದ ವೆಚ್ಚಗಳಿಗಾಗಿ ಪ್ರತಿ ತಿಂಗಳು ಅವಶ್ಯವಿರುವ ಸಂಕ್ಷಿಪ್ತ ಸಾದಿಲ್ವಾರು ಮುಂಗಡ ಹಣವನ್ನು ರೂ. 50,000/- ಗಳಿಂದ ರೂ. 1,00,000/- ಗಳಿಗೆ ಹೆಚ್ಚಿಸಲು ಆರ್ಥಿಕ ಸಮಿತಿ ಸಭೆಯು ಪರಿಶೀಲಿಸಿ, ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ- 16 | ರಿಮ್ಸ್ ಬೋಧಕ ಆಸ್ಪತ್ರೆಯ ಕಟ್ಟಡದ ನಾಲ್ಕು ಮೂಲೆಗಳ ಕಾರಿಡಾರ್‌ಗಳಲ್ಲಿ ಪಾಲಿ ಕಾರ್ಬೋನೇಟ್ ಶೀಟ್‌ಗಳನ್ನು ಅಳವಡಿಸಲು ಅನುಮತಿ ನೀಡುವ ಕುರಿತು. |

ಪ್ರಸ್ತುತ ರಿಮ್ಸ್ ಬೋಧಕ ಆಸ್ಪತ್ರೆಯ ಕಟ್ಟಡದ ನಾಲ್ಕು ಮೂಲೆಗಳ ಕಾರಿಡಾರ್‌ಗಳಲ್ಲಿ ನೆಲಮಹಡಿಯಿಂದ ಆರನೇ ಮಹಡಿಯವರಗೆ ತರೆದ ಸ್ಥಳವಿದ್ದು, ಈ ತೆರೆದ ಸ್ಥಳಗಳಲ್ಲಿ ರೋಗಿಗಳು ತ್ಯಾಜ್ಯ ವಸ್ತುಗಳನ್ನು ಎಸೆಯುತ್ತಿದ್ದು, ಇದರಿಂದಾಗಿ ನಲಮಮಹಡಿಯಲ್ಲಿರುವ ಎಲ್ಲಾ ವಿಭಾಗಗಳು, ವಾರ್ಡ್‌ಗಳು ಮತ್ತು ಕೊಠಡಿಗಳಿಗೆ ವಿಪರೀತ ದುರ್ವಾಸನೆ ಉಂಟಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ತೆರೆದ ಸ್ಥಳದಲ್ಲಿ ರೋಗಿಗಳು ತ್ಯಾಜ್ಯ ವಸ್ತುಗಳನ್ನು ಎಸೆಯದಂತೆ ನೋಡಿಕೊಳ್ಳಲು ಕಟ್ಟಡದ ನಾಲ್ಕು ಮೂಲೆಗಳಲ್ಲಿ ಪಾಲಿ ಕಾರ್ಬೋನೇಟ್ ಶೀಟುಗಳನ್ನು ಅಳವಡಿಸುವುದು ಅತಿ ಅವಶ್ಯಕವಾಗಿರುತ್ತದೆ.

ಈ ಸಂಬಂಧವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಪುಟೆಕ್ ಇವರಿಗೆ ಕಟ್ಟಡದ ನಾಲ್ಕು ಮೂಲೆಗಳ ಕಾರಿಡಾರ್‌ಗಳಲ್ಲಿ ಪಾಲಿ ಕಾರ್ಬೋನೇಟ್ ಶೀಟ್‌ಗಳನ್ನು ಅವಶ್ಯವಿರುವ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಸದರಿಯವರು ಕಟ್ಟಡದ ನಾಲ್ಕು ಮೂಲೆಗಳ ಕಾರಿಡಾರ್‌ಗಳಲ್ಲಿ ಪಾಲಿ ಕಾರ್ಬೋನೇಟ್ ಶೀಟ್‌ಗಳನ್ನು ಅಳವಡಿಸಲು ರೂ. 9,40,000/- ಗಳ ಅಂದಾಜು ಪಟ್ಟಿಯನ್ನು ದಿನಾಂಕ 05.04.2016ರಂದು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಮೆ॥ ಕ್ಯಾಪುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ. ವಇ / 156 / ಹೆಚ್‌ಎಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಕಾರಣ ರೋಗಿಗಳು ಹಾಗೂ ಸಿಬ್ಬಂದಿಗಳ ಹಿತದೃಷ್ಟಿಯಂದ ರಿಮ್ಸ್ ಬೋಧಕ ಆಸ್ಪತ್ರೆಯ ಕಟ್ಟಡದ ನಾಲ್ಕು ಮೂಲೆಗಳಲ್ಲಿ ಪಾಲಿ ಕಾರ್ಬೋನೇಟ್ ಶೀಟುಗಳನ್ನು ಅಳವಡಿಸಲು ಅವಶ್ಯವಿರುವ ರೂ. 9,40,000/- ಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಹಾಗೂ ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ. 62334775412 ದಲ್ಲಿ ಉಳಿತಾಯವಾಗಿರುವ ರೂ. 5,41,50,647/- ಗಳ ಅನುದಾನದಿಂದ ಈ ವೆಚ್ಚವನ್ನು ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯ ಕಟ್ಟಡದ ನಾಲ್ಕು ಮೂಲೆಗಳ ತೆರೆದ ಸ್ಥಳಗಳಲ್ಲಿ ರೋಗಿಗಳು ಹಾಗೂ ಸಾರ್ವಜನಿಕರು ತ್ಯಾಜ್ಯ ವಸ್ತುಗಳನ್ನು ಎಸೆಯದಂತೆ ನಿಯಂತ್ರಿಸಲು ಪಾಲಿ ಕಾರ್ಬೋನೇಟ್ ಶೀಟುಗಳನ್ನು ಅಳವಡಿಸಲು ಮೆ॥ ಕ್ಯಾಪುಟೆಕ್ ಇವರು ಸಲ್ಲಿಸಿರುವ ರೂ. 9,40,000/- ಗಳ ಅಂದಾಜುಪಟ್ಟಿಯನ್ನು ಪರಿಶೀಲಿಸಿ ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ಉಳಿತಾಯವಾಗಿರುವ ರೂ. 5,41,50,647/- ಗಳ ಅನುದಾನದಿಂದ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ- 17 | ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ವಿವಿಧ ಪರೀಕ್ಷೆಗಳ / ಸೇವೆಗಳ ಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ. |

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಪ್ರಸ್ತುತ ಅಳವಡಿಸಿಕೊಳ್ಳಲಾಗಿರುವ ಚಿಕಿತ್ಸಾ / ಪರೀಕ್ಷೆಗಳ ದರಗಳು ಬಹಳ ವರ್ಷಗಳಿಂದ ಅದೇ ದರಗಳನ್ನು ನಿರ್ವಹಿಸಿಕೊಂಡು ಬರಲಾಗುತ್ತಿದೆ. ಆದರೆ ಪ್ರಸ್ತುತ ಪರಿಸ್ಥಿತಿಯ ಕಾಲಕ್ಕನುಗುಣವಾಗಿ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಸ್ತುತವಿರುವ ಸೇವಾ ಶುಲ್ಕಗಳ ದರಗಳು ತುಂಬಾ ಕಡಿಮೆಯಿದ್ದು, ಕಾಲಕ್ಕನುಗುಣವಾಗಿ ಸಾರ್ವಜನಿಕರಿಗೆ ಸರಿಯಾದ ರೀತಿಯಲ್ಲಿ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ದರಗಳನ್ನು ಪರಿಷ್ಕರಿಸಿ ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರು ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಎಲ್ಲಾ ವಿಭಾಗಗಳ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರುಗಳ ಸಭೆಯನ್ನು ವೈದ್ಯಕೀಯ ಅಧೀಕ್ಷಕರ ಅಧ್ಯಕ್ಷತೆಯಲ್ಲಿ ಆಯೋಜಿಸಿ, ಬಳ್ಳಾರಿ, ಹುಬ್ಬಳ್ಳಿ ಮತ್ತು ಶಿವಮೊಗ್ಗ ಆಸ್ಪತ್ರೆಗಳ ಪ್ರಸ್ತುತ ಅಳವಡಿಸಿಕೊಳ್ಳಲಾಗಿರುವ ಈಗಿನ ದರಗಳ ಪಟ್ಟಿಯನ್ನು ಅವಲೋಕಿಸಿ, ಪರಿಷ್ಕೃತ ದರಗಳನ್ನು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಅಳವಡಿಸಿಕೊಳ್ಳಲು ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಕಾರಣ ಬಳ್ಳಾರಿ, ಹುಬ್ಬಳ್ಳಿ ಮತ್ತು ಶಿವಮೊಗ್ಗ ಆಸ್ಪತ್ರೆಗಳಲ್ಲಿ ಚಿಕಿತ್ಸಾ ದರಗಳನ್ನು ಪರಿಷ್ಕರಿಸಿರುವಂತೆ, ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿಯೂ ಸಹ ಅಳವಡಿಸಿಕೊಳ್ಳಬೇಕಾಗಿರುವುದರಿಂದ, ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಇತರ ಸ್ವಾಯತ್ತ ಸಂಸ್ಥೆಗಳಾದ ಬಳ್ಳಾರಿ, ಹುಬ್ಬಳ್ಳಿ, ಬೀದರ್ ಮತ್ತು ಶಿವಮೊಗ್ಗ ವೈದ್ಯಕೀಯ ಆಸ್ಪತ್ರೆಯಲ್ಲಿ ಈಗಾಗಲೇ ಅಳವಡಿಸಿಕೊಳ್ಳಲಾಗಿರುವ ನೂತನ ಪರಿಷ್ಕೃತ ಚಿಕಿತ್ಸಾ ದರಗಳನ್ನು ಮತ್ತೊಮ್ಮೆ ಧೃಡಿಕರಿಸಿಕೊಂಡು ನೂತನ ಚಿಕಿತ್ಸಾ ದರಗಳನ್ನು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿಯೂ ಸಹ ಅಳವಡಿಸಿಕೊಳ್ಳುವಂತೆ ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ವಿಷಯ ಸೂಚಿ ಸಂಖ್ಯೆ– 18 | ರಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ವಿವಿಧ ಪೀಠೋಪಕರಣಗಳನ್ನು ಖರೀದಿಸಲು ಅನುಮತಿ ನೀಡುವ ಕುರಿತು. |
|---|---|

ರಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಮತ್ತು ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ವೈದ್ಯಕೀಯ ಪುಸ್ತಕಗಳನ್ನು ಮತ್ತು ಇನ್ನಿತರ ಮುಖ್ಯ ಸಲಕರಣೆಗಳನ್ನು ಮತ್ತು ಇತರ ಅವಶ್ಯ ವಸ್ತುಗಳನ್ನು ಸುರಕ್ಷೀತವಾಗಿಡಲು ಅಲಮರಾ ಮತ್ತು ಬುಕ್ ರ್ಯಾಕ್‌ಗಳನ್ನು ಸರಬರಾಜು ಮಾಡಬೇಕಾಗಿರುತ್ತದೆ. ಪ್ರತಿ ಅಲಮಾರಗೆ ಅಂದಾಜು ರೂ. 9,800/– ಮತ್ತು ಬುಕ್ ರ್ಯಾಕ್‌ಗೆ ರೂ. 4,900/– ಗಳ ವೆಚ್ಚವಾಗುತ್ತಿದ್ದು, ಎಲ್ಲಾ ವಿಭಾಗಗಳಿಗೆ ಮತ್ತು ಕೇಂದ್ರ ಗ್ರಂಥಾಲಯಕ್ಕೆ ಈ ಕೆಳಗಿನ ನಮೂದಿಸಿದ ಪ್ರಮಾಣದಲ್ಲಿ ಖರೀದಿಸಲು ಅಂದಾಜು ಒಟ್ಟು ರೂ.9,74,000/– ವೆಚ್ಚವಾಗುತ್ತದೆ. ಈ ಕೆಳಕಂಡ ಪೀಠೋಪಕರಣಗಳ ಅವಶ್ಯಕತೆಯಿರುತ್ತದೆ.

| Sl. No | Department | Require Qty of Almara | Require Qty of Book Racks |
|---|---|---|---|
| 1 | Anatomy. | 02 | 02 |
| 2 | Physiology | 02 | 02 |
| 3 | Biochemistry | 02 | 02 |
| 4 | Microbiology | 02 | 02 |
| 5 | Pathology | 02 | 02 |
| 6 | Pharmacology | 02 | 02 |
| 7 | Forensic Medicine | 02 | 02 |
| 8 | Community Medicine | 02 | 02 |
| 9 | General Surgery | 02 | 02 |
| 10 | General Medicine | 02 | 02 |
| 11 | ENT | 02 | 02 |
| 12 | Orthopedic | 02 | 02 |
| 13 | Opthalmology | 02 | 02 |
| 14 | Skin and VD | 02 | 02 |
| 15 | Anasthesia | 02 | 02 |
| 16 | Psychairty | 02 | 02 |
| 17 | Radiology | 02 | 02 |
| 18 | OBG | 02 | 02 |
| 19 | Paediatric | 02 | 02 |
| 20 | TB & Chest | 02 | 02 |
| 21 | Dental | 02 | 02 |
| 22 | Library | 02 | 50 |
| Total Quantity | | 44 | 92 |
| Approximate Cost of Each | | 9,800/- | 5,900/- |
| Total Amount | | 4,31,200/- | 5,42,800/- |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಈ ವೆಚ್ಚವನ್ನು 2014–15ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210–05–105–1–54–101 ಯೋಜನೇತರ ಅಡಿಯಲ್ಲಿ ಸಿಬ್ಬಂದಿ ವೇತನ ಹಾಗೂ ಇತರ ವೆಚ್ಚಕ್ಕೆ ಬಿಡುಗಡೆಯಾಗಿ ಉಳಿತಾಯವಾಗಿರುವ ರೂ. 6,47,76,360/– ಗಳ ಅನುದಾನದಿಂದ ಭರಿಸಲಾಗುವುದು. ಕಾರಣ ವಿವಿಧ ವಿಭಾಗ ಹಾಗೂ ರಿಮ್ಸ್ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯವಿರುವ ಪೀಠೋಪಕರಣಗಳನ್ನು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಹಾಗೂ ಸದರಿ ಪೀಠೋಪಕರಣಗಳಿಗೆ ವೆಚ್ಚವಾಗುವ ಅಂದಾಜು ಮೊತ್ತ ರೂ. 9,74,000/– ಗಳನ್ನು 2014–15ನೇ ಸಾಲಿನ ಉಳಿತಾಯ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಮತ್ತು ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ವೈದ್ಯಕೀಯ ಪುಸ್ತಕಗಳನ್ನು, ಮುಖ್ಯ ಸಲಕರಣೆಗಳನ್ನು ಮತ್ತು ಇತರ ಅವಶ್ಯ ವಸ್ತುಗಳನ್ನು ಸುರಕ್ಷಿತವಾಗಿಡಲು ಅವಶ್ಯವಿರುವ ಅಲಮರಾ ಮತ್ತು ಬುಕ್ ರ್‍ಯಾಕ್‌ಗಳನ್ನು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಖರೀದಿಸಲು ಕ್ರಮ ಕೈಗೊಳ್ಳುವಂತೆ ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು 2014–15ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210–05–105–1–54–101 ಯೋಜನೇತರ ಅಡಿಯಲ್ಲಿ ಬಿಡುಗಡೆಯಾಗಿ ಉಳಿತಾಯವಾಗಿರುವ ರೂ. 6,47,76,360/– ಗಳ ಅನುದಾನದಿಂದ ಪಾವತಿಸಲು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ.– 19 | ರಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಲಿನನ್ ಸಾಮಾಗ್ರಿಗಳನ್ನು ಹಾಗೂ ಶಸ್ತ್ರಚಿಕಿತ್ಸಾ ಸಲಕರಣಗಳನ್ನು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ ಪೂರೈಸಿಕೊಳ್ಳಲು ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ರಿಮ್ಸ್ ಬೋಧಕ ಆಸ್ಪತ್ರೆಗೆ ದಿನನಿತ್ಯದ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸಿದ ಲಿನನ್ ಸಾಮಾಗ್ರಿಗಳು ಅವಶ್ಯಕವಾಗಿ ಪೂರೈಸಬೇಕಾಗಿರುತ್ತದೆ. ಹಾಗು ಇದಲ್ಲದೇ ಶಸ್ತ್ರ ಚಿಕಿತ್ಸಾ ಕೊಠಡಿಯಲ್ಲಿ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಲು ವಿವಿಧ ಶಸ್ತ್ರ ಚಿಕಿತ್ಸಾ ಸಲಕರಣಗಳನ್ನು ಪೂರೈಸಲು ವಿವಿಧ ವಿಭಾಗದ ಮುಖ್ಯಸ್ಥರು ಕೋರಿರುತ್ತಾರೆ. ಲಿನನ್ ಸಾಮಾಗ್ರಿಗಳಿಗಾಗಿ ಅಂದಾಜು ರೂ. 15.00 ಲಕ್ಷಗಳು ಹಾಗೂ ಶಸ್ತ್ರಚಿಕಿತ್ಸಾ ಸಲಕರಣೆಗಳಿಗಾಗಿ ಅಂದಾಜು ರೂ. 20.00 ಲಕ್ಷಗಳು ವೆಚ್ಚವಾಗುತ್ತದೆ.

| Sl. No | Name of the Linen & Bedding | Qty in units |
|---|---|---|
| 1 | Colored Bed Sheet | 500 |
| 2 | Disposable Cap | 30000 |
| 3 | Disposable Mask | 30000 |
| 4 | O.T. Gown Green | 200 |
| 5 | Abdominal Sheet | 100 |
| 6 | O.T .Towel | 200 |
| 7 | Plastic Aprons Washable | 500 |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| | | |
|---|---|---|
| 8 | PM Cloth 5Mtrs Each | 500 |
| 9 | Printed Bed sheets | 200 |
| 10 | O.T. Gown White | 200 |
| 11 | White Saree | 200 |
| 12 | Blouse | 200 |
| 13 | Patient Pyjama | 300 |
| 14 | Patient shirt | 300 |
| 15 | Table cloth | 300 |
| 16 | Red woolen blanket | 300 |
| 17 | Pillow cases Green | 500 |
| 18 | Screen Cloth | 500 |
| 19 | Mosquito Net | 200 |

ಈ ವೆಚ್ಚವನ್ನು 2014-15ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-05-105-1-54-101 ಯೋಜನೇತರ ಅಡಿಯಲ್ಲಿ ಸಿಬ್ಬಂದಿ ವೇತನ ಹಾಗೂ ಇತರ ವೆಚ್ಚಕ್ಕೆ ಬಿಡುಗಡೆಯಾಗಿ ಉಳಿತಾಯವಾಗಿರುವ ರೂ. 6,47,76,360/- ಗಳ ಅನುದಾನದಿಂದ ಭರಿಸಲಾಗುವುದು. ಕಾರಣ ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಲು ಅವಶ್ಯವಿರುವ ವಿವಿಧ ಶಸ್ತ್ರ ಚಿಕಿತ್ಸಾ ಸಲಕರಣಗಳನ್ನು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಇದಕ್ಕೆ ವೆಚ್ಚವಾಗುವ ಅಂದಾಜು ಮೊತ್ತ ರೂ. 35.00 ಲಕ್ಷಗಳನ್ನು 2014-15ನೇ ಸಾಲಿನ ಉಳಿತಾಯ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಲು ಅವಶ್ಯವಿರುವ ವಿವಿಧ ಲಿನನ್ ಸಾಮಾಗ್ರಿಗಳು ಹಾಗೂ ಶಸ್ತ್ರಚಿಕಿತ್ಸಾ ಸಲಕರಣಗಳನ್ನು ಮತ್ತೊಮ್ಮೆ ಪರಿಶೀಲಿಸಿ ಧೃಡಿಕರಿಸಿಕೊಂಡು ಕೆಟಿಪಿಪಿ ಕಾಯ್ದೆಯನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಹಾಗೂ ಇದಕ್ಕೆ ವೆಚ್ಚವಾಗುವ ಅಂದಾಜು ರೂ. 35.00 ಲಕ್ಷಗಳನ್ನು 2014-15ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-05-105-1-54-101 ಯೋಜನೇತರ ಅಡಿಯಲ್ಲಿ ಉಳಿತಾಯವಾಗಿರುವ ಅನುದಾನದಿಂದ ಭರಿಸಲು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ:- 20 | ಸದ್ಯ ಏಜನ್ಸಿಯ ಮೂಲಕ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆಯುತ್ತಿದ್ದು, ಅವರ ಸೇವಾವಧಿಯು ಮುಕ್ತಾಯವಾದ ನಂತರ ಗೃಹ ರಕ್ಷಕ ಸಿಬ್ಬಂದಿಗಳಿಂದ ಭದ್ರತಾ ಸೇವೆಯನ್ನು ಪಡೆಯಲು ಅನುಮತಿ ನೀಡುವ ಬಗ್ಗೆ |

ಈ ಕಾರ್ಯಾಲಯದ ಆದೇಶ ಸಂಖ್ಯೆ. ರಿಮ್ಸ್ / ಸರಬರಾಜು / ಟೆಂಡರ್ / 35 / 2015-16 ದಿನಾಂಕ 21.10.2015 ರನ್ವಯ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ರಿಮ್ಸ್ ವೈದ್ಯಕೀಯ ಕಾಲೇಜಿಗೆ ಅವಶ್ಯವಿರುವ 105 ಭದ್ರತಾ ಸಿಬ್ಬಂದಿಗಳು ಮತ್ತು 10 ಭದ್ರತಾ ಮೇಲ್ವಿಚಾರಿಕರ ಸೇವೆಯನ್ನು ದಿನಾಂಕ 01.11.2015 ರಿಂದ ದಿನಾಂಕ 31.10.2016 ರವರೆಗೆ ಒಂದು ವರ್ಷದ ಅವಧಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸದ್ಯ ಏಜನ್ಸಿ ಮೂಲಕ ಹೊರಗುತ್ತಿಗೆಯ ಆಧಾರದಲ್ಲಿ ನೇಮಿಸಿರುವ ಭದ್ರತಾ ಸಿಬ್ಬಂದಿಗಳು ಯಾವುದೇ ನಿಖರ ತರಬೇತಿಯನ್ನು ಹೊಂದಿರುವುದಿಲ್ಲ. ಹಾಗೂ ಹಲವು ಘಟನೆಗಳಲ್ಲಿ ಸಿಬ್ಬಂದಿಗಳಿಗೆ ಸೂಕ್ತ ರಕ್ಷಣೆಯನ್ನು ನೀಡಿರುವುದಿಲ್ಲ. ಮತ್ತು ಪೂರ್ಣ ಪ್ರಮಾಣದಲ್ಲಿ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪೂರೈಸುತ್ತಿರುವುದಿಲ್ಲ.

ಕಾರಣ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಒಟ್ಟು 105 ಗೃಹ ರಕ್ಷಕ ಸಿಬ್ಬಂದಿಗಳನ್ನು ಪೋಲಿಸ್ ಇಲಾಖೆಯಿಂದ ನೇಮಿಸಿಕೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಪ್ರತಿ ಗೃಹ ರಕ್ಷಕ ಸಿಬ್ಬಂದಿಗೆ ಪ್ರತಿ ದಿನಕ್ಕೆ ರೂ. 325/- ರಂತೆ ಮತ್ತು ಮಾಸಿಕವಾಗಿ ವಾಷಿಂಗ್ ಭತ್ಯೆ ರೂ. 25/- ಸೇರಿ ಪ್ರತಿ ಮಾಹೆ ರೂ. 9,775/- ಗಳಾಗುತ್ತಿದ್ದು, 75 ಗೃಹ ರಕ್ಷಕ ಸಿಬ್ಬಂದಿಗಳಿಗೆ ಪ್ರತಿ ಮಾಹೆ ರೂ. 10,26,375/- ಗಳಾಗುತ್ತದೆ. ಮತ್ತು ವಾರ್ಷಿಕವಾಗಿ ರೂ. 1,23,16,500/- ಗಳಾಗುತ್ತದೆ.

ಸಭೆಯ ತೀರ್ಮಾನ :-

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಒಟ್ಟು 105 ಗೃಹ ರಕ್ಷಕ ಸಿಬ್ಬಂದಿಗಳನ್ನು ಪ್ರಸ್ತುತವಿರುವ ಏಜನ್ಸಿಯವರ ಸೇವಾವಧಿಯು ಮುಕ್ತಾಯವಾದ ನಂತರ ನಿಯಮಾನುಸಾರ ಗೃಹ ರಕ್ಷಕ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಳ್ಳುವಂತೆ ಅನುಮತಿ ನೀಡಿ, ಗೃಹ ರಕ್ಷಕರ ಸೇವೆಯನ್ನು ಪಡೆಯುವ ಸಂಧರ್ಭದಲ್ಲಿ ಪೋಲಿಸ್ ಇಲಾಖೆ ಹಾಗೂ ಭಾರತೀಯ ಸೇನೆಯಿಂದ ನಿವೃತ್ತರಾದ ಸಿಬ್ಬಂದಿಗಳಿಗೆ ಮೊದಲ ಆದ್ಯತೆ ನೀಡುವಂತೆ ಆರ್ಥಿಕ ಸಮಿತಿ ಸಭೆಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ:- 21 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿರುವ ಬ್ಲಾಕ್ ಎ, ಬಿ ಮತ್ತು ಸಿ ಕಟ್ಟಡಗಳ ನಿರ್ವಹಣೆಯನ್ನು ಕೈಗೊಳ್ಳಲು ಅವಶ್ಯವಿರುವ ಅಂದಾಜು ಪಟ್ಟಿಗಳಿಗೆ ಅನುಮೋದನೆ ನೀಡುವ ಬಗ್ಗೆ |

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಸಿಬ್ಬಂದಿಗಳ ವಸತಿ ನಿಲಯಗಳಾದ ಬ್ಲಾಕ್ ಏ, ಬ್ಲಾಕ್ ಬಿ ಮತ್ತು ಬ್ಲಾಕ್ ಸಿ ಕಟ್ಟಡಗಳಲ್ಲಿ ಹಲವು ನ್ಯೂನತೆಗಳು ಇದ್ದುದರಿಂದ, ಹಾಗೂ ಈಗಾಗಲೇ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ, ಸದರಿ ಕಟ್ಟಡಗಳ ನಿರ್ವಹಣೆಯನ್ನು ಕೈಗೊಳ್ಳುವ ಸಂಬಂಧವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಯಾಷುಟೆಕ್ ಇವರಿಂದ ಓಪೆಕ್ ಆಸ್ಪತ್ರೆ ಬ್ಲಾಕ್ ಏ, ಬ್ಲಾಕ್ ಬಿ ಮತ್ತು ಬ್ಲಾಕ್ ಸಿ ಕಟ್ಟಡಗಳ ಅಂದಾಜು ಪಟ್ಟಿಗಳನ್ನು ಈ ಕೆಳಗಿನಂತೆ ಪಡೆದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

1) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಬ್ಲಾಕ್ "ಏ" ಕಟ್ಟಡದ ನಿರ್ವಹಣೆಯನ್ನು ಕೈಗೊಳ್ಳಲು ರೂ. 23,60,000/- ಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.
2) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಬ್ಲಾಕ್ "ಬಿ" ಕಟ್ಟಡದ ನಿರ್ವಹಣೆಯನ್ನು ಕೈಗೊಳ್ಳಲು ರೂ. 23,85,000/- ಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

3) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಬ್ಲಾಕ್ "ಸಿ" ಕಟ್ಟಡದ ನಿರ್ವಹಣೆಯನ್ನು ಕೈಗೊಳ್ಳಲು ರೂ. 24,10,000/- ಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

ಮೆ॥ ಕ್ಯಾಪುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ ವಇ / 156 / ಹೆಚ್ಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ ಆಕುಕ / 45 / ಎಂಎಂಇ / 2016 ದಿನಾಂಕ 28.03.2016 ರಲ್ಲಿ ಸೂಚಿಸಿರುವಂತೆ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಬ್ಲಾಕ್ ಎ, ಬ್ಲಾಕ್ ಬಿ ಮತ್ತು ಬ್ಲಾಕ್ ಸಿ ಕಟ್ಟಡಗಳ ನಿರ್ವಹಣೆಯನ್ನು ಕೈಗೊಳ್ಳುವ ಸಂಬಂಧ ಸರ್ಕಾರಕ್ಕೆ ಸಲ್ಲಿಸಲಾಗಿರುವ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಸಲಹಾ ಸಮಿತಿ / ಆರ್ಥಿಕ ಸಮಿತಿ / ಆಡಳಿತ ಮಂಡಳಿ ಸಭೆಗಳಲ್ಲಿ ಅನುಮೋದನೆಯನ್ನು ಪಡೆಯಲಾಗಿದೆಯೇ ಎಂಬುದರ ಕುರಿತು ನಡವಳಿಗಳ ಪ್ರತಿಗಳೊಂದಿಗೆ ಸರ್ಕಾರಕ್ಕೆ ಮಾಹಿತಿಯನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ ಆಕುಕ / 152 / ಎಂಎಸ್ಎಫ್ / 2015 ದಿನಾಂಕ 05.06.2015, 21.10.2015 ಹಾಗೂ 29.12.2015 ರನ್ವಯ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಪ್ರತಿ ತ್ರೈಮಾಸಿಕವಾಗಿ ರೂ. 2,26,25,000/- ಗಳ ಅನುದಾನವನ್ನು 2015-16ನೇ ಸಾಲಿಗೆ ಒಟ್ಟು ಈವರೆಗೆ ರೂ. 6,78,75,000/- ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 2015-16ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ರೂ. 1,15,27,000/- ಗಳ ಅನುದಾನವು ಈ ಸಂಸ್ಥೆಯಲ್ಲಿ ಉಳಿತಾಯವಾಗಿದ್ದು, ಅನುದಾನ ಲಭ್ಯವಿರುತ್ತದೆ.

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿ ವಾಸಿಸುತ್ತಿರುವ ಸಿಬ್ಬಂದಿಗಳ ಹಿತದೃಷ್ಟಿಯಿಂದ ಹಾಗೂ ಆವರಣದಲ್ಲಿನ ಕಟ್ಟಡಗಳನ್ನು ಸುಸ್ಥಿತಿಯಲ್ಲಿಡುವ ಸಲುವಾಗಿ ಮೆ॥ ಕ್ಯಾಪುಟೆಕ್ ಇವರಿಂದ ಬ್ಲಾಕ್-ಎ, ಬ್ಲಾಕ್ - ಬಿ ಮತ್ತು ಬ್ಲಾಕ್ - ಸಿ ಕಟ್ಟಡಗಳ ನಿರ್ವಹಣೆಯ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, ಈ ವೆಚ್ಚವನ್ನು 2015-16ನೇ ಸಾಲಿನಲ್ಲಿ ಉಳಿತಾಯವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿರುವ ಬ್ಲಾಕ್-ಎ, ಬ್ಲಾಕ್ - ಬಿ ಮತ್ತು ಬ್ಲಾಕ್ - ಸಿ ಕಟ್ಟಡಗಳ ನಿರ್ವಹಣೆಯ ಕಾಮಗಾರಿಗಳನ್ನು ಕೈಗೊಳ್ಳಲು ಮೆ॥ ಕ್ಯಾಪುಟೆಕ್ ಇವರು ಸಲ್ಲಿಸಿರುವ ಒಟ್ಟು ರೂ. 71,55,000/- (ಬ್ಲಾಕ್ ಎ ರೂ. 23,60,000/- + ಬ್ಲಾಕ್ ಬಿ ರೂ. 23,85,000/- ಹಾಗೂ ಬ್ಲಾಕ್ ಸಿ ರೂ. 24,10,000/-) ಗಳ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಆರ್ಥಿಕ ಸಮಿತಿ ಸಭೆಯು ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು 2015-16ನೇ ಸಾಲಿನಲ್ಲಿ ಉಳಿತಾಯವಾಗಿರುವ ರೂ. 1,15,27,000/- ಗಳ ಓಪೆಕ್ ಅನುದಾನದಿಂದ ಪಾವತಿಸಲು ಅನುಮತಿ ನೀಡಲಾಯಿತು.

ಮುಂದುವರೆದು ಮೆ॥ ಕ್ಯಾಪುಟೆಕ್ ಇವರು ಪ್ರಸಕ್ತ ಸಾಲಿಗೆ 4 ಜಿ ಯಿಂದ ವಿನಾಯಿತಿ ಪಡೆದಿರುವವರೆ ಎಂಬುದನ್ನು ಧೃಡಿಕರಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲು ನಿರ್ದೇಶನ ನೀಡಲಾಯಿತು.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ವಿಷಯ ಸೂಚಿ ಸಂಖ್ಯೆ.- 22 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು |
|---|---|

1) ರಿಮ್ಸ್ ಆವರಣದಲ್ಲಿರುವ ಸೋಲಾರ್ ಬೀದಿ ದೀಪಗಳ ದುರಸ್ಥಿಯನ್ನು ಕೈಗೊಳ್ಳುವ ಬಗ್ಗೆ.

ಸಭೆಯ ತೀರ್ಮಾನ

ರಿಮ್ಸ್ ಆವರಣದಲ್ಲಿರುವ ದುರಸ್ಥಿಯಲ್ಲಿರುವ ಎಲ್ಲಾ ಸೋಲಾರ್ ಬೀದಿ ದೀಪಗಳ ದುರಸ್ಥಿಯ ಬದಲಾಗಿ ವೈದ್ಯಕೀಯ ಮಹಾವಿದ್ಯಾಲಯದ ಸಂಪೂರ್ಣ ಆವರಣಕ್ಕೆ ಅವಶ್ಯವಿರುವ ಸ್ಥಳಗಳಲ್ಲಿ ಮಾಸ್ಟರ್ ಪ್ಲಾನ್ ರಚಿಸಿಕೊಂಡು ಆವರಣದ ಎಲ್ಲಾ ಕಡೆ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಅನುಮೋದನೆ ನೀಡಲಾಯಿತು.

2) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಿಂದ ರಿಮ್ಸ್ ಆವರಣದಲ್ಲಿರುವ ದ್ರವ ತ್ಯಾಜ್ಯ ಘಟಕಕ್ಕೆ ಒಳ ಚರಂಡಿ ಸಂಪರ್ಕವನ್ನು ಕಲ್ಪಿಸುವ ಬಗ್ಗೆ.

ಸಭೆಯ ತೀರ್ಮಾನ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಲೋಕ್‌ಅದಾಲತ್ ನ್ಯಾಯಲಯದ ನಿರ್ದೇಶನದಂತೆ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟ ಆಸ್ಪತ್ರೆಯ ಒಳಚರಂಡಿ ನೀರನ್ನು ಶುದ್ದಿಕರಿಸಬೇಕಾಗಿರುವುದರಿಂದ ಓಪೆಕ್ ಆಸ್ಪತ್ರೆಯಿಂದ ರಿಮ್ಸ್ ಆವರಣದಲ್ಲಿರುವ ದ್ರವ ತ್ಯಾಜ್ಯ ಘಟಕಕ್ಕೆ ಒಳಚರಂಡಿ ಸಂಪರ್ಕವನ್ನು ಕಲ್ಪಿಸಿಕೊಳ್ಳಲು ಸಂಸ್ಥೆಯ ಕನ್ಸಲ್ಟೆಂಟ ಇವರಿಂದ ಅಂದಾಜು ಪಟ್ಟಿಯನ್ನು ಪಡೆದು ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಆರ್ಥಿಕ ಸಮಿತಿ ಸಭೆಯು ಅನುಮೋದನೆ ನೀಡಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು